ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೩, ಸಂಚಿಕೆ ೯, ಫೆಬ್ರವರಿ ೨೦೧೬

ಒಲವೆಂಬ ಉಸಿರದುವೆ ಸಿಗುತಿರಲು

ಜೀವನವಾಗದು ಗಂಟು

ಕಲೆಯಂತೆ ಬಿಡಿಸುತ್ತ ಬದುಕಿರಲು

ತಿಳಿವುದನಂತನ ನಂಟು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ಸುದ್ದಿ ... ಪು. ೨
ಬೆಂಗಳೂರು ಸುದ್ದಿ ... ಪು. ೩

ಚಿಲುಮೆಯ ಒಳಗೆ

ರಾಂ ರಾಮ ... ಪು. ೫
ವಿಚಾರ-ವಿಹಾರ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೯
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧
ಪದ ಪುಂಜ/ರಂಗೋಲಿ ... ಪು. ೧೧

ಚಿಲುಮೆಯ ಒಳಗೆ

ಶಾಯರಿ ... ಪು. ೧೨
ಸಂತೆಯ ನೆನಪು ... ಪು. ೧೩

ಚಿಲುಮೆಯ ಒಳಗೆ

ಮಹಡಿ ಬಸ್ಸಿನ ಕನಸು(ಕಥೆ) ... ಪು. ೧೪
ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೦

ಅಸಾದುಲ್ಲ ಬೇಗ್ - ಶಾಯರಿ

ಪುಟ ೧೨

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಫೆಬ್ರವರಿಯ ವಿಶೇಷವೇನು ಎಂದರೆ ಬಹುತೇಕ ಎಲ್ಲರ ಬಾಯಲ್ಲೂ ಮೊದಲು ಬರುವುದು "ವ್ಯಾಲೆಂಟೈನ್ಸ್ ಡೇ" ಎನ್ನುವ ಪ್ರೇಮಾರಾಧನೆಯ ದಿನ. ಈ ದಿನದ ಹಿನ್ನಲೆಯ ವ್ಯಕ್ತಿಯಾದ ಸೇಂಟ್ ವ್ಯಾಲೆಂಟೈನ್ ರಿಗೆ ಗಂಡುಹೆಣ್ಣಿನ ಒಲವನ್ನು ವೈಭವೀಕರಿಸುವ ಉದ್ದೇಶವಿತ್ತೋ ಇಲ್ಲವೋ, ಆದರೆ ಈಗಂತೂ ಇದೊಂದು ವಾಣಿಜ್ಯೋದ್ಯಮದ ಸರಕಾಗಿಯಂತೂ ಕಾಣುತ್ತಿದೆಯೆನ್ನುವುದನ್ನು ಅಲ್ಲಗಳೆಯಲಾಗದು.

"ಪ್ರೇಮವೆನಲು ಹಾಸ್ಯವೆ" ಎಂದು ಕೆ.ಎಸ್.ನ. ಅವರ ಕವನವನ್ನು ಉದಾಹರಿಸುತ್ತ ಪ್ರೇಮಪರವಾದ ವಾದವನ್ನು ಸಮರ್ಥಿಸುವುದು ನಿತ್ಯದ ಮಾತೇ ಆದರೂ, ಅದೇ ಕವನದ ಪೂರ್ಣ ಇಂಗಿತವನ್ನು ಅರಿಯಲಾರದೆ ಹೋಗುತ್ತೇವೆ ಎನ್ನುವುದೂ ಅಷ್ಟೇ ಸತ್ಯ. ಅದೇ ಕವನದಲ್ಲಿ "ಹೇಗೋ ಸೇರಿ ಹೊಂದುಕೊಂಡು", "ದುಃಖ ಹಗುರವೆನುತಿರೆ" ಎನ್ನುವ ಆ ಕವಿಯು ಒತ್ತಿ ಹೇಳುವ ಮಾತುಗಳನ್ನು ಅಷ್ಟಾಗಿ ನೋಡದೆ "ಪ್ರೇಮ" ಎಂಬ ಅಕ್ಷರಪುಂಜವನ್ನು ಮಾತ್ರ ಇಟ್ಟುಕೊಂಡು, ಆ ಪ್ರೇಮದ ಬೆಳಕನ್ನು ಕಾಣದೆ, ಬರೀ ವ್ಯಾಮೋಹಕ್ಕೆ ಒಳಪಟ್ಟು, ಅದೊಂದೇ ಸಾಕು ಎನ್ನುವ ಸಂಕುಚಿತ ದೃಷ್ಟಿಕೋನದಿಂದ, ಜೀವನಕ್ಕೆ ಅಷ್ಟೇನು ಉಪಯೋಗವಾಗುವುದಿಲ್ಲವೆನ್ನುವುದು ಸಾರ್ವಕಾಲಿಕವಾಗಿ ಕೇಳಿಬರುವ ಮಾತು.

ಪ್ರೇಮಾರಾಧನೆ ಖಂಡಿತ ಅವಶ್ಯವು. ಆದರೆ, ಪ್ರೇಮಕ್ಕಿಂತಲೂ ನಾವಿಡಬೇಕಾದ ಮೊದಲ ಹೆಜ್ಜೆ ಸೌಜನ್ಯವೆಂದರೆ ತಪ್ಪಾಗಲಾರದು. ಒಂದು ಸಮಾಜದಲ್ಲಿ ಜೀವಿಸುವ ನಮ್ಮೆಲ್ಲರಲ್ಲಿರಬೇಕಾದ ಅತ್ಯವಶ್ಯಕ ಗುಣವೆಂದರೆ ಸೌಜನ್ಯತೆ. ದ್ರೋಣನು ದ್ರುಪದನ ಆಸ್ಥಾನಕ್ಕೆ ಬಂದಾಗ ದ್ರುಪದನು ದ್ರೋಣನನ್ನು ಕಾಲಕಸವಾಗಿ ಕಾಣುತ್ತಾನೆ. ಕುಮಾರವ್ಯಾಸ ಭಾರತದಲ್ಲಿ ಆಗ ದ್ರೋಣನು ಹೇಳುವ ಮಾತು "ಏನು ಬಂದಿರಿಯೆಂಬ ಗುಣವಚನಾನುರಾಗವು ಸಾಲದೇ" ಎಂದು. ಬಂದವರನ್ನು, ಏನು ಬಂದಿರಿ, ಹೇಗಿದ್ದೀರಿ ಎನ್ನುವ ಒಂದು ಸೌಜನ್ಯದ ಮಾತು ಇಲ್ಲದಿದ್ದರೆ ಅವರೆಷ್ಟೇ ಪ್ರೇಮವನ್ನು ತೋರಿದರೂ ನಮ್ಮನ್ನು ಆಪ್ತರನ್ನಾಗಿಸಲಾರರಲ್ಲವೇ! ಬಸವಣ್ಣ ಒಂದು ಕಡೆ ಹೇಳುವ ಮಾತು ಸೌಜನ್ಯದ ಅವಶ್ಯಕತೆಯನ್ನು ಎತ್ತಿ ತೋರಿಸುತ್ತದೆ. "ಏನಿ ಬಂದಿರಿ, ಹದುಳಿದ್ದಿರೆಂದರೆ ನಿಮ್ಮ ಮೈಸಿರಿ ಹಾರಿಹೋಹುದೇ ?" – ಹೇಗಿದ್ದೀರಿ ಎಂದು ಕೇಳಿದರೆ ನಮಗೆ ನಷ್ಟವೇನು ಎನ್ನುವುದು ವಚನಕಾರನ ಪ್ರಶ್ನೆ.

ನಿಜವಲ್ಲವೆ! ಓಹ್! ಅವರು ಹೀಗೆ. ಇವರು ಹಾಗೆ. ಅವರ ಮನೆಯವರು ನನಗೆ ತೊಂದರೆ ಕೊಟ್ಟರು, ನಮ್ಮ ಸಹಾಯ ಪಡೀತಾರೆ ಅಷ್ಟೇ, ನಮಗೆ ಇವರಿಂದ ಉಪಯೋಗವಿಲ್ಲ. ಮಾತಾಡಿಸಿದರೆ ಬೆರಳನ್ನೇ ನುಂಗುವವರು... ಇತ್ಯಾದಿಗಳಿಂದ ನಾವು ಪೂರ್ವಗ್ರಹಪೀಡಿತರಾದರೆ, ಸಮಾಜದ ಮಾತು ಬಿಡಿ. ಒಂದು ಪುಟ್ಟ ಸಂಸಾರದಲ್ಲೂ ಗಂಡು ಹೆಣ್ಣಿನ ನಡುವೆ ಬೇಧ ಬಂದು ಕೇವಲ ತೋರಿಕೆಯ ಪ್ರೇಮ ಉಳಿಯಬಹುದು. ಎಷ್ಟು ವ್ಯಾಲೆಂಟೈನ್ಸ್ ಡೇ ಬಂದರೇನು! ಕೆಂಪುಹೂವು ಮಾರುವ ವ್ಯಾಪಾರಸ್ಥರಿಗೆ ಲಾಭದಾಯಕವಾಗುತ್ತದೆಯೇ ಹೊರತು ನಮ್ಮ ಹೃದಯದಲ್ಲಿ ಸೌಜನ್ಯ ಮೂಡದ ಹೊರತು ಪ್ರೇಮಾಂಕುರವಾಗುವುದಿಲ್ಲವಲ್ಲವೇ!

ಹಾಗಾಗದೆ, ನಮ್ಮೆಲರ ಮಾನಸ ಸರೋವರದಿ ಸೌಜನ್ಯವು ತುಂಬಿರಲಿ. ಆ ಕಕ್ಕುಲತೆಯ ಪರಿಸರದಲ್ಲಿ ಪ್ರೇಮಕಮಲವು ಉದಯಿಸಲಿ ಎನ್ನುವುದೇ ವ್ಯಾಲೆಂಟೈನ್ಸ್ ಡೇ ಸಂದರ್ಭದಲ್ಲಿ ಹೊರನಾಡ ಚಿಲುಮೆಯ ಓದುಗರಿಗೆ ನಮ್ಮ ಹಾರೈಕೆಗಳು ▪

ಎರಡು ತಿಂಗಳ ಪ್ರಮುಖ ದಿನಗಳು

ಫೆಬ್ರವರಿ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಹೇಮಂತ/ಶಿಶಿರ, ಪುಷ್ಯ/ಮಾಘ ಮಾಸ

02 ಮಂ – ಪಂಚಾಕ್ಷರಿ ಗವಾಯಿ ಜಯಂತಿ
04 ಗು – ಷಟ್ ತಿಲ ಏಕಾದಶಿ,ವಿಶ್ವ ಕ್ಯಾನ್ಸರ್ ದಿನ
08 ಸೋ – ಅವರಾತ್ರಿ ತೈ ಅಮಾವಾಸ್ಯೆ
08 ಸೋ - ಪುರಂದರ ಪುಣ್ಯದಿನ/ಗರುಡ ಜಯಂತಿ
13 ಶ – ವಿಶ್ವ ರೇಡಿಯೋ ದಿನ
14 ಭಾ - ವ್ಯಾಲೆಂಟೈನ್ಸ್ ಡೇ
16 ಮಂ – ಮಧ್ವನವಮಿ 18 ಗು – ಜಯ/ಭೀಷ್ಮ ಏಕಾದಶಿ
19 ಶು - ಶಿವಾಜಿ/ವಾದಿರಾಜ ಜಯಂತಿ 22 ಸೊ – ಭಾರತ/ವ್ಯಾಸ ಹುಣ್ಣಿಮೆ
26 ಶು - ಸಂಕಷ್ಟ ಚತುರ್ಥಿ 28 ಭಾ - ರಾಷ್ಟ್ರೀಯ ವಿಜ್ಞಾನ ದಿನ

ಮಾರ್ಚ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ/ಫಾಲ್ಗುಣ ಮಾಸ

05 ಶ – ವಿಜಯಾ ಏಕಾದಶಿ
07 ಸೋ - ಮಹಾಶಿವರಾತ್ರಿ
08 ಭಾ - ಅಂ ರಾ ಮಹಿಳಾ ದಿನ, 09 ಬು – ಅಮಾವಾಸ್ಯೆ/ ಚಂದ್ರ ಗ್ರಹಣ
10 ಗು - ಫಾಲ್ಗುಣ ಮಾಸ ಆರಂಭ/ಶ್ರೀ ರಾಮಕೃಷ್ಣ ಪರಮಹಂಸ ಜಯಂತಿ
19 ಶ ಅಮಲಕೀ ಏಕಾದಶಿ
27 ಭಾ - ಸಂಕಷ್ಟ ಚತುರ್ಥಿ /ವಿಶ್ವ ರಂಗಭೂಮಿ ದಿನ
23 ಬು - ಹೋಳಿ ಹಬ್ಬ, ಹೋಳಿ ಹುಣ್ಣಿಮೆ
25 ಶು - ಗುಡ್ ಫ್ರೈಡೆ
26 ಶ - ಹೋಲಿ ಸಾಟರ್ಡೇ 27 ಭಾ - ಈಸ್ಟರ್ ಸಂಡೇ

ಪ್ರಿಯಾಂಕ ಚಲನ ಚಿತ್ರ - ನೈಜ ಕಥೆ ಅದ್ಭುತ ಚಿತ್ರಣ

ಕನಕಾಪುರ ನಾರಾಯಣ

ಕಳೆದ ಫೆಬ್ರವರಿ ೫ ರಂದು ಖ್ಯಾತ ನಿರ್ದೇಶಕ ದಿನೇಶ್ ಬಾಬು ಅವರ "ಪ್ರಿಯಾಂಕ" ವಿಶ್ವದೆಲ್ಲೆಡೆ ಒಟ್ಟಿಗೆ ಬೆಳ್ಳಿತೆರೆಗೆ ಬಿಡುಗಡೆ ಕಂಡಿತು.ಸಿದ್ನಿಯಲ್ಲಿ ಎಂದಿನಂತೆ ವಾರಾಂತ್ಯದಲ್ಲಿ ತೆರೆಕಂಡ ಈ ಚಿತ್ರಕ್ಕೆ ನಿರೀಕ್ಷೆಯಷ್ಟು ಕಿಕ್ಕಿರಿದು ಜನ ಸೇರದಿದ್ದರೂ ತಕ್ಕ ಮಟ್ಟಿಗೆ ೮೦% ಚಿತ್ರಮಂದಿರ ತುಂಬಿತ್ತು. ಬೆಂಗಳೂರಿನಲ್ಲಿ ಹಿಂದೆ ನಡೆದ ನಿಜವಾದ ಕೊಲೆಯ ಘಟನೆಯನ್ನಾಧಾರಿಸಿ ತಯಾರಿಸಿರುವ ಈ ಚಿತ್ರದ ಕಥೆ, ಚಿತ್ರಕಥೆ, ನಿರ್ದೇಶನ, ಛಾಯಾಗ್ರಹಣ ಎಲ್ಲ ಕ್ಷೇತ್ರದಲ್ಲೂ ದಿನೇಶ್ ಬಾಬು ಸೈ ಎನಿಸಿಕೊಂಡಿದ್ದಾರೆ. ಪೋಲೀಸ್ ಅಧಿಕಾರಿಯಾಗಿ ಪ್ರಕಾಶ್ ರೈ ಅಭಿನಯವಂತೂ ಅದ್ಭುತ,ಅವರು ಮಧ್ಯೆ ಮಧ್ಯೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ತಮಿಳು ಎಲ್ಲಾ ಭಾಷೆ - ಶೈಲಿಯಲ್ಲೂ ಸರಾಗವಾಗಿ ಪಟಪಟನೆ ಸಂಭಾಷಣೆ ನುಡಿಯುವುದೇ ಚೆನ್ನ. ನೋಡಲು ಒಂದೊಂದು ಕೋನದಿಂದ ಶಂಕರ್ ನಾಗ್ ಥರ ಕಾಣುವ ನಟ ತೇಜಸ್ ಅಂತೂ ಅಮೋಘ ಅಭಿನಯ ಪ್ರದರ್ಶಿಸಿದ್ದಾರೆ. ಮೊದಮೊದಲು ನಿಧಾನವೆನಿಸಿದರೂ ದ್ವಿತೀಯಾರ್ಧದಲ್ಲಿ ಚಿತ್ರ ಕುತೂಹಲಕಾರಿಯಾಗಿದೆ. ಟೆಕ್ಕಿ ಜೀವನ, ಹೆಣ್ಣನ್ನು ಕೆಲವರು ನೋಡುವ ದೃಷ್ಟಿ, ಪೋಲೀಸ್ ವಿಚಾರಣೆ ವಿಧಾನ, ಫೇಸ್ ಬುಕ್ ಮತ್ತು ಸೋಶಿಯಲ್ ಮೀಡಿಯಾಗಳಿಂದಾಗುವ ಅಘಾತಗಳು ಮುಖ್ಯವಾಗಿ ಗಮನಿಸಬೇಕಾದ ಅಂಶಗಳಾಗಿದೆ.

ಫ್ಲಾಶ್ ಬ್ಯಾಕ್ ಹೇಳುತ್ತಾ ವಾಸ್ತವಕ್ಕೆ ಮರಳಿ ಬರುವ ಶೈಲಿಯ ಚಿತ್ರಣ ನಿಜವಾಗಿಯೂ ಮೆಚ್ಚುವಂಥದ್ದು. ಇನ್ನು ಪ್ರಿಯಾಂಕ ಚಿತ್ರದ ನಾಯಕಿ ಅತಿರೂಪದ ಸುಂದರಿ ಮೂಲ ಉತ್ತರ ಭಾರತದ ಹುಡುಗಿಯಾದರೂ ರಿಯಲ್ ಸ್ಟಾರ್ ಅವರ ಧರ್ಮಪತ್ನಿಯಾದ ಇವರು ಕನ್ನಡ ಮಾತಾಡುವ ಬಗೆಗೆ ಪಾತ್ರಕ್ಕೆ ಮೈಗೂಡಿಸುವ ನೈಜ ಅಭಿನಯ ಚಿತ್ರದ ಮುಖ್ಯ ವಸ್ತು. ಅನ್ಯೋನ್ಯವಾಗಿ ಬಾಳುತಿದ್ದ ದಂಪತಿಗಳ ನಡುವೆ ಮೂರನೆ ವ್ಯಕ್ತಿಯ ಪ್ರವೇಶ, ಗಂಡನ ಕೊಲೆ ಅಪರಾಧಿ ಪೋಲೀಸರ ಬಳಿ ತಾನಾಗೇ ತಪ್ಪು ಒಪ್ಪಿಕೊಳ್ಳುವುದು ಕೋರ್ಟ್ ನಿರ್ಧಾರ ನಂತರ ನಡೆಯುವ ಕುತೂಹಲಕಾರಿ ದೃಶ್ಯಗಳು ಮೈ ನವಿರೇಳಿಸುತ್ತದೆ. ಇಂಪಾದ ಹಾಡುಗಳು ಸೊಗಸಾದ ಸಂಗೀತ ಚಿತ್ರಕ್ಕೆ ಹೇಳಿ ಮಾಡಿಸಿದೆ. ಫೈಟ್ ಸ್ಟಂಟ್ ಮಚ್ಚು ಲಾಂಗ್ ಪಿಸ್ತೂಲ್ ಬಾಂಬ್ ಇವ್ಯಾವುದೂ ಇಲ್ಲದೆ ಇಷ್ಟೊಂದು ಚೆನ್ನಾಗಿ ಚಿತ್ರ ಮಾಡಿರುವುದು ದಿನೇಶ್ ಬಾಬು ಅವರ ನಿರ್ದೇಶನದ ಕ್ಕೆ ಶಹಬಾಶ್ ಹೇಳಲೇ ಬೇಕು. ಹೊರದೇಶದಲ್ಲಿ ನಿಮ್ಮಲ್ಲೂ ತೆರೆಕಂಡರೆ ಚಿತ್ರ ಖಂಡಿತ ನೋಡಿ ಅದರ ಸಂದೇಶ ಪಡೆಯಬಹುದು.ಕನ್ನಡ ಚಿತ್ರಗಳು ಹೊರದೇಶಕ್ಕೆ ಈ ನಡುವೆ ಹೆಚ್ಚಾಗಿ ಬರುತ್ತಿವೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹಿಸಿದಲ್ಲಿ ಇನ್ನೂ ಉತ್ತಮ ಚಿತ್ರಗಳನ್ನು ತರಿಸಬಹುದು ಎನ್ನುವ ಅಭಿಲಾಶೆಯಲ್ಲಿ ಈ ಪುಟ್ಟ ವರದಿಗೆ ಅಂತ್ಯ ಹೇಳುತ್ತೇನೆ. ▪

ಶನಿವಾರ, 23.1.2016ರಂದು ಬೆಂಗಳೂರಿನಲ್ಲಿರುವ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಸಹಯೋಗದಲ್ಲಿ ಆರ್. ಕೆ. ಲಕ್ಷ್ಮಣ್ ಅವರ ಕೊರವಂಜಿ ಕಾರ್ಟೂನ್‌ಗಳ ಪ್ರದರ್ಶನ ಮತ್ತು ನೆನಪಿನ ಸಮಾರಂಭ ನಡೆಯಿತು. ಇದಕ್ಕಾಗಿ ದೂರದ ಮುಂಬೈಯಿಂದ ಆರ್. ಕೆ. ಲಕ್ಷ್ಮಣ್ ಅವರ ಸೊಸೆ ಉಷಾ ಅವರು ಬಂದಿದ್ದುದು ಸಮಾರಂಭಕ್ಕೆ ಮೆರುಗು ಕೊಟ್ಟಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಉಷಾ ಅವರು ತಮ್ಮ ಹಾಗೂ ತಮ್ಮ ಮಾವನವರ ಒಡನಾಡದ ದಿನಗಳನ್ನು ನೆನಪು ಮಾಡಿಕೊಂಡರು. ಅವರ ಪ್ರೀತಿಯ ಸವಿಯನ್ನು ಉಂಡು ಬೆಳೆದ ದಿನಗಳನ್ನು ಲಕ್ಷ್ಮಣ್ ಅವರ ವಾತ್ಸಲ್ಯವನ್ನೂ ಕೊಂಡಾಡಿ ಉಷಾ ನನ್ನ ಸೊಸೆಯಲ್ಲ ನನ್ನ ಮಗಳು ಎಂದಿದ್ದು ನನಗೆ ಬಹುದೊಡ್ಡ ಕೊಡುಗೆ ಎಂದು ಸ್ಮರಿಸಿದರು. ಒಂದು ಕಾಲದಲ್ಲಿ ಲಕ್ಷ್ಮಣ್ ಅವರಿಗೆ ಕಡಿಮೆ ನಂಬರು ಬಂದಿದೆ ಎನ್ನುವ ಕಾರಣಕ್ಕೆ ಅವರು ಕಲಿಯಲು ಆಸೆಪಟ್ಟಿದ್ದ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನಲ್ಲಿ ಪ್ರವೇಶ ನಿರಾಕರಿಸಿದ್ದರು. ಆದರೆ ಇದೀಗ ಮಹಾರಾಷ್ಟ್ರ ಸರ್ಕಾರದ ಸಂಕಲ್ಪದಿಂದ ಆರ್. ಕೆ. ಲಕ್ಷ್ಮಣ್ ಅವರ ಕಂಚಿನ ಪುತ್ಥಳಿ ಅದೇ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಆವರಣದಲ್ಲಿ ಸಧ್ಯದಲ್ಲಿಯೇ ಅನಾವರಣಗೊಳ್ಳಲಿದೆ ಎಂದು ತಿಳಿಸಿದ್ದು ಸಭಿಕರಿಗೆಲ್ಲಾ ಸಂತಸ ತಂದಿತ್ತು.

ಲಕ್ಷ್ಮಣ್ ಅವರ ಕಾರ್ಟೂನ್ ಕಲೆಗಾರಿಕೆಯ ದಿನಗಳನ್ನು ನೆನಪುಮಾಡಿದ ಕೊರವಂಜಿ ಅಪರಂಜಿ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಮತ್ತು ಅಪರಂಜಿ ಪತ್ರಿಕೆಯ ಸಂಪಾದಕ ಎಂ. ಶಿವಕುಮಾರ್ ಅವರು ಲಕ್ಷ್ಮಣ್ ಅವರನ್ನು ನಾ ಕಸ್ತೂರಿಯವರು ಆಗ 1942ರಲ್ಲಿ ಪ್ರಾರಂಭವಾಗಿದ್ದ ರಾಶಿ ಸಂಪಾದಕತ್ವದ ಕೊರವಂಜಿಗೆ ಕಾರ್ಟೂನ್ ಬರೆಯಲು ಹೇಳಿದ್ದನ್ನು ನೆನಪು ಮಾಡಿದರು. ಕೊರವಂಜಿಯ ಪ್ರಥಮ ಸಂಚಿಕೆಯಲ್ಲೇ ಲಕ್ಷ್ಮಣ್ ಅವರ ವ್ಯಂಗ್ಯಚಿತ್ರ ರಾರಾಜಿಸುತ್ತಿತ್ತು. ಹಾಗೆ ಪ್ರಾರಂಭವಾಗಿದ್ದು ಲಕ್ಷ್ಮಣ್ ಅವರ ವ್ಯಂಗ್ಯಚಿತ್ರ ಕಲೆ. ಅನೇಕ ವರ್ಷಗಳ ಕಾಲ ಲಕ್ಷ್ಮಣ್ ಅವರು ಕೊರವಂಜಿಗೆ ವ್ಯಂಗ್ಯಚಿತ್ರಗಳನ್ನು ರಚಿಸಿಕೊಟ್ಟರು. ಅಂದು ಪ್ರದರ್ಶನಗೊಂಡ ಎಲ್ಲಾ ವ್ಯಂಗ್ಯಚಿತ್ರಗಳನ್ನೂ ಪ್ರೇಕ್ಷಕರು ಬಲು ಆಸಕ್ತಿಯಿಂದ ಗಮನಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತಾಡಿದ ಕೊರವಂಜಿ ಅಪರಂಜಿ ಟ್ರಸ್ಟ್‌ನ ಟ್ರಸ್ಟಿ ಮತ್ತು ಅಪರಂಜಿ ಪತ್ರಿಕೆಯ ಉಪಸಂಪಾದಕ ಬೇಲೂರು ರಾಮಮೂರ್ತಿಯವರು ಲಕ್ಷ್ಮಣ್ ಅವರ ಬದುಕಿನ ಹತ್ತು ಹಲವು ಮಜಲುಗಳನ್ನು ಪರಿಚಯ ಮಾಡಿಕೊಟ್ಟರು. ಜೊತೆಜೊತೆಗೆ ಲಕ್ಷ್ಮಣ್ ಅವರ ವ್ಯಂಗ್ಯಚಿತ್ರಗಳ ವೈಖರಿಯನ್ನು ಉದಾಹರಣೆ ಸಮೇತ ತಿಳಿಸಿದರು.

ಆರ್. ಕೆ. ಲಕ್ಷಣ್ ಸ್ವಾರಸ್ಯ

ಆರ್. ಕೆ. ಲಕ್ಷ್ಮಣ್ ಅವರ ತಾಯಿ ಟೆನ್ನಿಸ್, ಇಸ್ಪೀಟ್ ಮತ್ತು ಚೆಸ್ ಆಟಗಳಲ್ಲಿ ಪ್ರವೀಣೆ. ಅವರು ಈ ಆಟಗಳನ್ನು ಅಂದಿನ ಮೈಸೂರು ಮಹಾರಾಣಿಯವರ ಜೊತೆಗೆ ಆಡುತ್ತಿದ್ದರು ಎನ್ನುವುದು ಹೆಗ್ಗಳಿಕೆ. ವಾರಕ್ಕೆ 2 ಬಾರಿ ಇಂಥಾ ಆಟಗಳನ್ನು ಆಯೋಜಿಸುತ್ತಿದ್ದರು. ಲಕ್ಷ್ಮಣ್ ಅವರು ಹೇಳುವಂತೆ ಅವರ ತಾಯಿಯವರು ಮಹಾರಾಣಿಯವರ ಎದುರಿನಲ್ಲಿ ಬಹಳ ಕಷ್ಟಪಟ್ಟು ಸೋಲುತ್ತಿದ್ದರು ಎಂತ. (ಎಂದರೆ ಮಹಾರಾಣಿಯವರ ಎದುರಿನಲ್ಲಾಗಲೀ, ಮಹಾರಾಜರ ಎದುರಿನಲ್ಲಾಗಲೀ ಆಟಗಳಲ್ಲಿ ಗೆಲ್ಲುವುದು ಅಂಥಾ ಸಂತೋಷದ ಸಮಾಚಾರಗಳಲ್ಲ)

ಮುಂದಿನ ಪುಟ ನೋಡಿ ...



ಮಹಾರಾಣಿಯವರ ಜೊತೆ ಆಟಗಳಲ್ಲಿ ಭಾಗವಹಿಸಿದ ಮಹಿಳೆಯರಿಗೆ ಅಂದು ರಾತ್ರಿ ಅರಮನೆಯಲ್ಲಿ ಔತಣ ಕೂಟ ಇರುತ್ತಿತ್ತು. ಲಕ್ಷ್ಮಣ್ ಅವರು ತಮ್ಮ ತಾಯಿ ಔತಣಕೂಟ ಮುಗಿಸಿಕೊಂಡು ಬರುವುದನ್ನೇ ಕಾಯುತ್ತಿದ್ದರು. ಏಕೆಂದರೆ ಮಹಾರಾಣಿಯವರು ಎಲ್ಲರ ಮನೆಗೂ ಒಂದೊಂದು ಬುಟ್ಟಿಯಲ್ಲಿ ತಿಂಡಿಗಳನ್ನು ಕಳಿಸಿಕೊಡುತ್ತಿದ್ದರು (ಆಟದಲ್ಲಿ ತಮ್ಮ ಜೊತೆ ಸೋತಿದ್ದ ಸಂತೋಷಕ್ಕಾಗಿ) ಇಂಥಾ ದಿನಗಳಲ್ಲಿ ತಾಯಿ ಬರುವುದು ತುಸು ತಡವಾದರೆ ಲಕ್ಷ್ಮಣ್ ಅವರ ತಂದೆ ಸಿಡಿಮಿಡಿಗೊಳ್ಳುತ್ತಿದ್ದರು. ಅವರನ್ನೇ ನೋಡುತ್ತಿದ್ದ ಲಕ್ಷ್ಮಣ್ ಅವರು ಒಂದು ದಿನ ತಂದೆಯ ಕೋಪದ ನಾನಾ ಭಂಗಿಗಳನ್ನು ಹಾಳೆಯಲ್ಲಿ ಬರೆದುಬಿಟ್ಟರು. ಅದನ್ನು ನೋಡಿದ ಅವರ ತಂದೆ ನನ್ನನ್ನೇ ಗೇಲಿ ಮಾಡ್ತೀಯ ಅಂತ ಆ ಹಾಳೆಯನ್ನು ಹರಿದು ಹಾಕಲು ಬಂದರೆ ತಾಯಿ ಅದನ್ನು ಹರಿಬೇಡಿ ಅವನು ಚನ್ನಾಗಿ ಚಿತ್ರ ಬರೆದಿದ್ದಾನೆ ಎಂದು ಹೊಗಳಿದ್ದೇ ಅಲ್ಲದೇ ಅದನ್ನು ತಮ್ಮ ಸ್ನೇಹಿತೆಯರಿಗೆಲ್ಲಾ ತೋರಿಸಿ ನೋಡಿ ನನ್ನ ಮಗ ಎಷ್ಟು ಚನ್ನಾಗಿ ಚಿತ್ರ ಬರೆದಿದ್ದಾನೆ ಎಂದು ಸಂತೋಷಿಸುತ್ತಿದ್ದರು. ಇಂಥಾ ಘಟನೆಗಳು ನನ್ನ ಮುಂದಿನ ವ್ಯಂಗ್ಯಚಿತ್ರ ಬದುಕಿಗೆ ಸ್ಫೂರ್ತಿಯಾಯಿತು ಎಂದು ಲಕ್ಷ್ಮಣ್ ಅವರು ನೆನಪಿಸಿಕೊಳ್ಳುತ್ತಾರೆ.

ಲಕ್ಷ್ಮಣ್ ಅವರ ಶಾಲೆಯ ಓದು ಅಷ್ಟಕ್ಕಷ್ಟೆ ಇತ್ತು. ತಂದೆ ಲಕ್ಷ್ಮಣ್ ಅವರು ಶಾಲೆಗೆ ಹೋಗಲೇಬೇಕು ಎಂದು ಬಲವಂತ ಮಾಡಿದವರಲ್ಲ. ಆದರೆ ಬೆಳೆಯುತ್ತಿರುವ ಹುಡುಗ ಮನೆಯಲ್ಲೇ ಕೂರುವುದು ಎಷ್ಟು ಸರಿ ಎಂದು ನೆಂಟರು ಲಕ್ಷ್ಮಣ್ ಅವರನ್ನು ಶಾಲೆಗೆ ಸೇರಿಸಿದ್ದರು. ಶಾಲೆಯಲ್ಲೂ ಲಕ್ಷ್ಮಣ್ ಅವರ ತುಂಟತನ ಇದ್ದೇ ಇತ್ತು. ಒಂದು ಸಾರಿ ಶಾಲೆಯಲ್ಲಿ ಪಾಠ ಮಾಡುತ್ತಿದ್ದ ಮೇಷ್ಟ್ರ ವ್ಯಂಗ್ಯಚಿತ್ರವನ್ನು ಬಿಡಿಸುತ್ತಾ ಪುಸ್ತಕದ ಕಡೆಯ ಹಾಳೆಯಲ್ಲಿ ಒಂದು ಹುಲಿಯ ಚಿತ್ರ ಬರೆದು ಅದಕ್ಕೆ ಮೇಷ್ಟ್ರ ಹೆಸರು ಬರೆಯುತ್ತಿರುವಾಗ ಬಂದು ನೋಡಿದ ಮೇಷ್ಟ್ರು ರೇಗಿ ಏನೋ ನನ್ನನ್ನು ಹುಲಿಗೆ ಹೋಲಿಸುತ್ತೀಯಾ ಎಂತ ಕೇಳಿದರೆ ಲಕ್ಷ್ಮಣ್

ಅವರು ತಾವು ಬರೆದಿದ್ದ ಹುಲಿಯ ಚಿತ್ರವನ್ನು ತೋರಿಸಿ ಸರ್. ಈ ಹುಲಿ ಯಾರನ್ನೂ ಏನೂ ಮಾಡುವುದಿಲ್ಲ ಸರ್ ಎಂದಿದ್ದರು.

ಲಕ್ಷ್ಮಣ್ ಅವರ ಕೆಲವು ನುಡಿಮುತ್ತುಗಳು

- ನನ್ನ ಸ್ಕೆಚ್ ಪೆನ್ನು ಒಂದು ಒಳ್ಳೆಯ ಸ್ನೇಹಿತನೇ ಹೊರತು ಕತ್ತಿಯಲ್ಲ
- ಭಾರತಕ್ಕೆ ಲಗ್ಗೆ ಹಾಕಿದ್ದ ಬ್ರಿಟಿಷರು ಭಾರತದ ಹಾಸ್ಯಪ್ರಜ್ಞೆಯನ್ನು ತಿಳಿಯದಾದರು. ಅವರಿಗೆ ಅನಿಸಿದ್ದು ಭಾರತದಲ್ಲಿ ಹಾಸ್ಯಪ್ರಜ್ಞೆಯೇ ಇಲ್ಲ ಎಂದು.
- ಕಾಗೆಗಳು ಅದೆಷ್ಟು ಬುದ್ದಿವಂತವು ಮತ್ತು ಅಷ್ಟೇ ಲಕ್ಷಣವಾಗೂ ಕಾಣುತ್ತವೆ. ಇಂತಹ ವ್ಯಕ್ತಿತ್ವವನ್ನು ನಾವು ರಾಜಕಾರಣದಲ್ಲಿ ಕಾಣೋದು ಸಾಧ್ಯವೇ
- ನಿಜವಾಗಲೂ ಭಾರತದ ರಾಜಕಾರಣ ಮತ್ತು ರಾಜಕಾರಿಣಿಗಳು ಎಷ್ಟು ಮಹತ್ವದ್ದು ಎಂದರೆ ನಾನೇನಾದರೂ ವ್ಯಂಗ್ಯಚಿತ್ರಕಾರನಾಗಿಲ್ಲದೇ ಇದ್ದರೆ ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ.
- ಪ್ರತಿ ಬೆಳಗಿನಲ್ಲೂ ನನಗೆ ಆಫೀಸಿಗೆ ಹೋಗೋಕೇ ಬೇಜಾರು. ಮತ್ತೆ ಅದೇ ಪತ್ರಿಕೆಗಳನ್ನು ಓದೋದು, ವ್ಯಂಗ್ಯಚಿತ್ರ ಬಿಡಿಸೋದು. ಇವತ್ತೆ ಕಡೆ ನಾನು ಆಫೀಸಿಗೆ ಹೋಗೋದು. ಇವತ್ತೇ ನನ್ನ ರಾಜೀನಾಮೆ ಕೊಟ್ಟು ಬರ್ತೀನಿ ಎಂದುಕೊಂಡೇ ಆಫೀಸಿಗೆ ಹೋಗುತ್ತಿದ್ದೆ. ಆದರೆ ಸಂಜೆಯವೊಳಗೆ ನಾನು ಬರೆದ ವ್ಯಂಗ್ಯಚಿತ್ರ ನನಗೇ ತೃಪ್ತಿಯಾಗಿ ಮನೆಗೆ ಮರಳುವಾಗ ಖುಷಿಯಿಂದ ಮರಳುತ್ತಿದ್ದೆ ಮತ್ತು ರಾಜೀನಾಮೆ ವಿಚಾರ ಮರೆತೇ ಹೋಗುತ್ತಿತ್ತು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ರಾಕ್ಷಸರ ಟ್ರಾನ್ಸ್‌ಫರ್ ಪ್ರಸಂಗವು

ದೇವಾಸುರಲೋಕದ ವರ್ಗಾವಣೆ ವಿಭಾಗ. ಸಭೆಯಲ್ಲಿ ಹಿರಣ್ಯಕಶಿಪು, ರಾವಣ, ಬಕಾಸುರ, ಮುಂತಾದ ಸರ್ವಶ್ರೇಷ್ಠ ರಾಕ್ಷಸರು ಕುಳಿತಿದ್ದಾರೆ. ರಕ್ಕಸರ ಗುರು ಶುಕ್ರಾಚಾರ್ಯರು ವರ್ಗಾವಣೆಗಳ ಇನ್‌ಚಾರ್ಜ್ ಗುಪ್ತಚಿತ್ತರ ಬಳಿ ಸಾರಿ "ಗುರುಗಳೇ, ಕೇವಲ ದೇವತೆಗಳೆಂಬ ಅಲ್ಪಸಂಖ್ಯಾತರಿಗೇ ಆದ್ಯತೆಯ ಮೇಲೆ ವರ್ಗಾವಣೆ ಮಾಡಿಸುತ್ತಿದ್ದೀರಿ. ವರ್ಗಾವಣೆ ನಡೆದ ಜಾಗದಲ್ಲಿ ದೇಗುಲಗಳೆಂಬ ವಸತಿಗೃಹಗಳನ್ನು ಕಟ್ಟಿಕೊಟ್ಟು, ಕೈಗೆ ಕಾಲಿಗೆ ಅರ್ಚಕರೆಂಬ ಪರಿಚಾರಕರನ್ನು ಕೊಟ್ಟು ಉದ್ಧಾರ ಮಾಡಿದ್ದೀರಿ. ಆದರೆ ರಕ್ಕಸರ ಪಾಡು ಬೆಂಗಳೂರಿನ ಬೀದಿನಾಯಿಯ ಪಾಡಿಗಿಂತಲೂ ಅತ್ತತ್ತವಾಯಿತಲ್ಲಾ... ರಕ್ಕಸರಿಗೂ ಬೇರೆ ರೂಪವನ್ನು ಕೊಡುವ ಮೂಲಕ ಪ್ರೊಮೋಶನ್ ಮೇಲೆ ವರ್ಗಾವಣೆಯನ್ನು ಕರುಣಿಸಿ" ಎಂದರು.

"ಸರಿ. ಅವರವರ ಯೋಗ್ಯತೆಗೆ ತಕ್ಕಂತೆ ವರ್ಗಾವಣೆ ಮಾಡೋಣ. ಕರೆಯಿರಿ ಮೊದಲ ಅಭ್ಯರ್ಥಿಯನ್ನು" ಎಂದರು ಗುಪ್ತಚಿತ್ತ.

ಕುಂಗ್‌ಫು, ಕರಾಟೆ ಪ್ರಿಯರು ತೊಡಗಿಕೊಳ್ಳುವ ಫ್ಲೈಯಿಂಗ್ ಕಿಕ್‌ನಂತಹ ಹೊಡೆತವನ್ನು ತೋರುತ್ತಲೇ ಛಂಗನೆ ಹಾರಿಬಂದು ನಿಂತ ಮೊದಲ ರಾಕ್ಷಸ "ಎಲ್ಲಿರುವನು ನಿನ್ನ ಹರಿ? ಈ ಕಂಬದಲ್ಲಿ ಇರುವನೇ? ಆ ಕಂಬದಲ್ಲಿ ಇರುವನೇ?" ಎನ್ನುತ್ತಾ ಕಂಬ ಒದ್ದುದರಿಂದಲೇ ಪ್ರಖ್ಯಾತನಾದ ನನಗೆ ಒಂದು ಜಾಗವನ್ನು ಕರುಣಿಸಿರಿ" ಎಂದು ವಿನಯದಿಂದ ಅಬ್ಬರಿಸಿದನು.

ಶುಕ್ರಾಚಾರ್ಯರು "ಇವನಿಗೆ ಮೂರು ಕ್ವಾಲಿಫಿಕೇಶನ್‌ಗಳಿವೆ. ದೇವರ ಅಸ್ತಿತ್ವದ ಬಗ್ಗೆ ಸಂದೇಹ ವ್ಯಕ್ತಪಡಿಸಿರುವುದರಿಂದ ಅಸಹಿಷ್ಣುತೆ ಪಡೆಯ ಅಧ್ಯಕ್ಷನಾಗಬಹುದು. ಮಗನ ಮೇಲೆ ದೌರ್ಜನ್ಯ ನಡೆಸಿದುದರಿಂದ ಆಲ್ ಖೈದಾದ ಮಕ್ಕಳ ಆತ್ಮಹತ್ಯಾ ಬಾಂಬ್ ದಳದ ನಿರ್ದೇಶಕನಾಗಬಹುದು. ಮತ್ತೊಂದು..." ಎನ್ನುವಷ್ಟರಲ್ಲಿ ಗುಪ್ತಚಿತ್ತ "ಮೂರನೆಯ ಕ್ವಾಲಿಫಿಕೇಶನ್ನಿನ ಆಧಾರದ ಮೇಲೆ ಈ ರಕ್ಕಸನಿಗೆ ವರ್ಗಾವಣೆ ಮಾಡುತ್ತಿದ್ದೇನೆ. ಇಂದಿನಿಂದ ಹಿರಣ್ಯಕಶಿಪು ಕರ್ನಾಟಕದಲ್ಲಿ ಅವರಿವರ ಮನೆಗಳನ್ನು ಗಂಟೆಗಳಲ್ಲೇ ಸೊಗಸಾಗಿ ಕೆಡವಿಹಾಕಿಬಿಡುವ ರಾಕ್ ಕ್ರಶರ್‌ಗಳಾಗಿ ಜನ್ಮ ತಾಳಲಿ" ಎಂದರು. ಹಿರಣ್ಯಕಶಿಪು ಸಂತೋಷದಿಂದ ಬೆಂಗಳೂರಿಗೆ ಬಂದು ಕೆರೆ ಒತ್ತುವರಿ ಜಮೀನಿನಲ್ಲಿನ ಎಲ್ಲ ಮನೆಗಳನ್ನು ಕೆಡವುವ ಗುತ್ತಿಗೆದಾರರಿಗೆ ನೆರವಾಗುತ್ತಾ ಕೃತಕೃತ್ಯತೆಯನ್ನು ಪಡೆದನು.

"ಎರಡನೆಯ ಅಭ್ಯರ್ಥಿ ಒಬ್ಬ ಲೇಡಿ ಕ್ಯಾಂಡಿಡೇಟ್. ಹೆಸರು ಪೂತನಿ. ವಿಷಮಿಶ್ರಿತ ಹಾಲು ಕೊಡುವುದರ ಮೂಲಕ ಶಿಶುಗಳನ್ನು ಯಮಪುರಿಗೆ ಅಟ್ಟಿದಂತಹ ಖ್ಯಾತಿ" ನುಡಿದರು ಶುಕ್ರಾಚಾರ್ಯರು

"ಇದಕ್ಕಂತೂ ನಮ್ಮಲ್ಲಿ ಒಳ್ಳೆಯ ಇಲಾಖೆಯೇ ಇದೆ. ಎಕ್ಸ್‌ಪೈರಿ ಡೇಟ್ ಮುಗಿದ, ಔಷಧಿಯ ರೂಪದಲ್ಲಿದ್ದೂ ವಿಷವಾಗಿರುವ ವಸ್ತುಗಳನ್ನು ಬಡವರಿಗೆ ಚಿಕಿತ್ಸೆಯ ರೂಪದಲ್ಲಿ ನೀಡುವ ವೈದ್ಯರ ಅಸೋಸಿಯೇಶನ್ನಿಗೆ ಈಕೆಯನ್ನು ಕಾರ್ಯದರ್ಶಿಯಾಗಿ ನೇಮಿಸುತ್ತೇನೆ" ಎಂದರು ಗುಪ್ತಚಿತ್ತ.

"ಕ್ಷಮಿಸಿ ಗುಪ್ತಚಿತ್ತರೆ, ವಿಷಕ್ಕೆ ಸಂಬಂಧಿಸಿದ ಪೋರ್ಟ್‌ಫೋಲಿಯೋವನ್ನು ಭೀಮನಿಗೆ ವಿಷ ಉಣಿಸಿದ ಆಧಾರದ ಮೇಲೆ ಕ್ವಾಲಿಫೈ ಆದ ದುರ್ಯೋಧನನಿಗೆ ಆಗಲೇ ನೀಡಲಾಗಿದೆ" ಎಂದರು ಶುಕ್ರಾಚಾರ್ಯರು

"ಓಹ್! ಸರಿ. ಪೂತನಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗದ ಅಧ್ಯಕ್ಷತೆಯನ್ನು ನೀಡಿ ವರ್ಗಾವಣೆ ಮಾಡುತ್ತಿದ್ದೇನೆ" ನುಡಿದರು ಗುಪ್ತಚಿತ್ತ. ಸಂತಸಗೊಂಡ ಪೂತನಿ ಅಲ್ಲಿಂದ ಠಣ್ಣನೆ ಮಾಯವಾದಳು.

ಕ್ಯೂನಲ್ಲಿ ಮೂರನೆಯವನಾಗಿ ಇದ್ದವನು ರಕ್ತಬೀಜಾಸುರ. ''ಎಲ್ಲ ರಾಕ್ಷಸರಂತೆ ಮುನಿಗಳನ್ನು ದೇವತೆಗಳನ್ನು ಗೋಳುಹೊಯ್ದುಕೊಂಡು ಸಂತೋಷದಿಂದಿದ್ದೆ. ನನ್ನ ಪ್ರತಿ ಹನಿ ರಕ್ತ ನೆಲಕ್ಕೆ ಬಿದ್ದಾಗಲೂ ಒಬ್ಬೊಬ್ಬ ರಾಕ್ಷಸ ಹುಟ್ಟುತ್ತಿದ್ದುದೇ ನನ್ನ ಸ್ಪೆಷಾಲಿಟಿ'' ಪರಿಚಯಿಸಿಕೊಂಡ ರಕ್ತಬೀಜಾಸುರ.

''ಕಾಳಿಕಾದೇವಿಗೇ ಸವಾಲಾಗಿದ್ದ ರಾಕ್ಷಸನೀತ'' ಶುಕ್ರಾಚಾರ್ಯರು ನುಡಿದರು.

''ನಿನಗೆ ಒಳ್ಳೆಯ ಪೋಸ್ಟಿಂಗೇ ಇದೆ. ಇಂದಿನಿಂದ ನಿನಗೆ ಭ್ರಷ್ಟಾಚಾರ ಎಂದು ನಾಮಕರಣ ಮಾಡಿದ್ದೇನೆ. ನೀನು ಭಾರತದ ಪ್ರತಿ ಸರ್ಕಾರಿ ಕಚೇರಿಯ ಟೇಬಲ್ ಟೇಬಲ್ಲಿನಲ್ಲೂ ಪ್ರತಿಷ್ಠಾಪನೆಯಾಗುತ್ತೀಯೆ. ನಿನ್ನನ್ನು ರೈಡ್ ಮೂಲಕ ವಧೆ ಮಾಡಲು ಯತ್ನಿಸಿದರೆ ಅನ್ಯಮಾರ್ಗದಿಂದ ಮತ್ತಷ್ಟು ವಿಜೃಂಭಿಸುವ ಶಕ್ತಿ ಹೊಂದುತ್ತೀಯೆ. ನಡೆ, ಭಾರತವನ್ನು ಆಕ್ರಮಿಸು'' ನುಡಿದರು ಗುಪ್ತಚಿತ್ತ. ಭ್ರಷ್ಟಾಚಾರ ಅಟ್ಟಹಾಸದಿಂದ ಅಬ್ಬರಿಸುತ್ತಾ ಭಾರತವನ್ನು ತಲುಪಿತು.

ಮುಂದಿನ ಪುಟ ನೋಡಿ ...

“ನಾಲ್ಕನೆಯ ಅಭ್ಯರ್ಥಿ ಜರಾಸಂಧ. ಹುಟ್ಟಿದಾಗ ಎರಡು ಹೋಳಾಗಿದ್ದ ಇವನನ್ನು ತೊಟ್ಟಿಗೆ ಎಸೆದಿದ್ದರು. ನಂತರ ರಕ್ಕಸಿಯೊಬ್ಬಳು ಎಸೆದಿದ್ದ ತುಂಡುಗಳನ್ನು ಒಂದರ ಪಕ್ಕ ಒಂದಾಗಿ ಇರಿಸಿದಾಗ ಹೋಳುಗಳು ಸೇರಿ ಪೂರ್ಣ ದೇಹವಾಯಿತು. ಈ ರಕ್ಕಸನೂ ತನ್ನ ಶಕ್ತ್ಯಾನುಸಾರ ಜನಗಳಿಗೆ ತೊಂದರೆ ಕೊಡುವುದರ ಮೂಲಕ ಒಳ್ಳೆಯ ರಾಕ್ಷಸನೆಂಬ ಕೀರ್ತಿಗೆ ಭಾಜನನಾಗಿದ್ದಾನೆ” ಶುಕ್ರಾಚಾರ್ಯರು ನುಡಿದರು.

“ಕರ್ನಾಟಕ ಮತ್ತು ಬಿಹಾರದಲ್ಲೂ ಎರಡು ಹೋಳುಗಳು ಯಾರಿಗೂ ಬೇಡವಾಗಿದ್ದವು. ಆದರೆ ಎರಡು ಹೋಳುಗಳು ಸೇರಿದಮೇಲೆ ಆಡಳಿತವೆಂಬ ದೇಹ ಸೃಷ್ಟಿಯಾಗಿ ಜನರಿಗೆ ಕಿರುಕುಳ ಕೊಡಲು ಸಹಕಾರಿಯಾಗಿವೆ. ಈ ರಕ್ಕಸನನ್ನು ಆ ಎರಡು ಸಮ್ಮಿಶ್ರಗಳ ಸಲಹೆಗಾರನಾಗಿ ನೇಮಿಸಿ ಭಾರತಕ್ಕೆ ವರ್ಗಾವಣೆ ಮಾಡುತ್ತಿದ್ದೇನೆ” ಎಂದರು ಗುಪ್ತಚಿತ್ತ. “ಅನುಗ್ರಹಿತೋಸ್ಮಿ” ಎನ್ನುತ್ತಾ ಜರಾಸಂಧ ಹೊರನಡೆದ.

“ಮುಂದಿನ ಅಭ್ಯರ್ಥಿ ಚಕ್ರಾಸುರ. ಶ್ರೀಕೃಷ್ಣನನ್ನು ಬಾಲ್ಯದಲ್ಲೇ ಕೊಲ್ಲಲು ಹೋಗಿ ಹತನಾದ ಹತಭಾಗ್ಯ ರಕ್ಕಸ” ನುಡಿದರು ಶುಕ್ರಾಚಾರ್ಯರು.

‘‘ನಿನಗೆ ಒಬ್ಬ ಸಹಾಯಕ ಸಿಗುವನೇನು?’’ ಕೇಳಿದರು ಗುಪ್ತಚಿತ್ತ.

‘‘ವ್ಯವಸ್ಥೆ ಮಾಡಿಕೊಳ್ಳಬಲ್ಲೆ ಪ್ರಭುಗಳೇ’’ ನುಡಿದ ಚಕ್ರಾಸುರ.

‘‘ಹಾಗಿದ್ದರೆ ನೀನು ಪಡ್ಡೆ ಹುಡುಗರು ಓಡಿಸುವ ವೇಗದ ಕಾರ್ಗಳ ಹಾಗೂ ಕುಡುಕರು, ಕ್ಲೀನರ್ಗಳು ಓಡಿಸುವ ಲಾರಿ ಹಾಗೂ ವೋಲ್ವೋಗಳ ಚಕ್ರಗಳಾಗಿ ರೂಪತಾಳಿ ಭಾರತಮಾತೆಯ ಜನಸಂಖ್ಯಾ ಭಾರವನ್ನು ಕಡಿಮೆಗೊಳಿಸುವಲ್ಲಿ ಸಹಾಯಕನಾಗು ಚಕ್ರಾಸುರನೆ. ನಿನ್ನ ಅಸಿಸ್ಟೆಂಟ್ ಸೆಲ್ಫಿ ಸ್ಟಿಕ್ ಆಗಿ ಜನ್ಮ ತಾಳಿ ರೈಲುಹಳಿ, ಸೇತುವೆ, ಸಮುದ್ರಗಳಲ್ಲಿ ಸೆಲ್ಫಿ ತೆಗೆದುಕೊಳ್ಳುವವರಿಗೆ ಅಂತಿಮ ದೃಶ್ಯ ಕರುಣಿಸುವಂತಾಗಲಿ. ಇದೋ ವರ್ಗಾವಣೆಯ ಆರ್ಡರ್’’ ಎಂದರು ಗುಪ್ತಚಿತ್ತ.

‘‘ನೆಕ್ಸ್ಟ್ ಅಭ್ಯರ್ಥಿ ಬಕಾಸುರ. ಬಂಡಿಗಟ್ಟಲೆ ಅನ್ನ, ಕುರಿ, ಕೋಳಿ, ಮನುಷ್ಯ, ಎಲ್ಲವನ್ನೂ ತಿಂದು ಜೀರ್ಣಿಸಿಕೊಳ್ಳುತ್ತಿದ್ದವನು’’ ಎಂದು ಶುಕ್ರರು ನುಡಿಯುತ್ತಿದ್ದಂತೆಯೇ ಬಕಾಸುರ ಮುಂದೆ ಬಂದ.

‘‘ಎಲ್ಲವನ್ನೂ ತಿಂದು ಅರಗಿಸಿಕೊಳ್ಳುವುದಕ್ಕೇ ಒಂದು ಇಲಾಖೆಯಿದೆ. ಅದನ್ನು ನಾವು ಸೆಂಟ್ರಲ್ ಪಿಡಬ್ಲ್ಯೂಡಿ ಎನ್ನುತ್ತೇವೆ. ಅಲ್ಲಿಯೂ, ಹಾಗೂ ಅದರ ಅಂಗಸಂಸ್ಥೆಗಳಾದ ಸ್ಟೇಟ್ ಪಿಡಬ್ಲ್ಯೂಡಿಗಳಲ್ಲಿಯೂ ಕಲ್ಲು, ಮಣ್ಣು, ಸಿಮೆಂಟು, ನಿವೇಶನ, ಕೆರೆ, ಬಾವಿ, ಅರಣ್ಯ ಎಲ್ಲವನ್ನೂ ನುಂಗುವ ಸಮರ್ಥರಿದ್ದಾರೆ. ಆ ಇಲಾಖೆಯ ಮುಖ್ಯಸ್ಥನನ್ನಾಗಿ ನಿನ್ನನ್ನು ಈ ಮೂಲಕ ನೇಮಿಸುತ್ತಿದ್ದೇನೆ. ಚಿರಕಾಲ ಸರ್ವವನ್ನೂ ಗುಳುಂ ಮಾಡುತ್ತಾ ಸಂತೋಷದಿಂದ ಅಧಿಕಾರ ಚಲಾಯಿಸು’’ ಎನ್ನುತ್ತಾ ಗುಪ್ತಚಿತ್ತ ವರ್ಗಾವಣೆ ಪತ್ರವನ್ನು ಬಕಾಸುರನ ಕೊಕ್ಕಿಗೆ ಅಳವಡಿಸಿದ.

‘‘ಮುಂದಿನ ಮೂವರು ಒಂದೇ ಫ್ಯಾಮಿಲಿಯವರು. ರಾವಣ, ಕುಂಭಕರ್ಣ, ವಿಭೀಷಣ’’ ಶುಕ್ರಾಚಾರ್ಯ ಉವಾಚ.

‘‘ರಾವಣನಿಗೆ ವೇಷ ಮರೆಸಿಕೊಂಡು ಬರುವ ಉಗ್ರರು, ಕಿಡ್ನ್ಯಾಪ್ ಮಾಡುವ ಭಯೋತ್ಪಾದಕರ ಅಸೋಸಿಯೇಶನ್ನಿನ ಪಾರುಪತ್ಯ ಕೊಟ್ಟು ವರ್ಗಾವಣೆ ಮಾಡುತ್ತಿದ್ದೇನೆ. ಕ್ಷಮೆಯಿರಲಿ. ಈತನಿಗೆ ಈಗಿನ ಭಾರತದ ಭಾಗದಲ್ಲಿ ಸೂಕ್ತ ಉದ್ಯೋಗ ಇಲ್ಲವಾದ್ದರಿಂದ ಇವನನ್ನು ಪಾಕಿಸ್ತಾನಕ್ಕೆ ಸ್ಪೆಶಲ್ ಪವರ್ಸ್ ಟು ಡೆಸ್ಟ್ರಾಯ್ ಮೇಲೆ ವರ್ಗಾವಣೆ ಮಾಡಿದ್ದೇನೆ’’

‘‘ವಿಭೀಷಣ?’’

‘‘ಟ್ರಾನ್ಸ್‌ಫರ್ ಪೆಂಡಿಂಗಿನಲ್ಲಿರಲಿ. ಲೋಕಸಭೆ, ರಾಜ್ಯಸಭೆಗಳ ಚುನಾವಣೆ ಹತ್ತಿರ ಬಂದಾಗ ಭಿನ್ನಮತದ ಹೊಣೆ ನೀಡಿ ವಿಶೇಷ ಆಫೀಸರ್ರಾಗಿ ನೇಮಕ ಮಾಡಲಾಗುತ್ತದೆ’’

‘‘ಕುಂಭಕರ್ಣ?’’

‘‘ಈ ರಕ್ಕಸನದೇ ತೊಂದರೆ. ಮಾಜಿ ಪ್ರಧಾನಿಗಳ ಸಂಘದ ಅಧ್ಯಕ್ಷಗಿರಿ ನೀಡೋಣವೆಂದರೆ ಹಾಲಿ ರಾಜ್ಯ ಮುಖ್ಯಮಂತ್ರಿಗಳ ಸಂಘಕ್ಕೆ ಕೋಪ ಬರುತ್ತದೆ. ರಾಜ್ಯಗಳ ಮುಖ್ಯಮಂತ್ರಿಗಳ ಸಂಘಕ್ಕೇ ಅಧ್ಯಕ್ಷನನ್ನಾಗಿಸೋಣ ಎಂದರೆ ಸರ್ಕಾರಿ ಕಚೇರಿಗಳಲ್ಲಿ ನಿದ್ರಿಸುವವರ ಒಕ್ಕೂಟಕ್ಕೆ ಬೇಸರವಾಗುತ್ತದೆ. ಅಲ್ಲಿನ ಅಧ್ಯಕ್ಷಗಿರಿ ಕೊಟ್ಟರೆ ಸಭೆ, ಸಮಾರಂಭ, ತರಗತಿಗಳಲ್ಲಿ ನಿದ್ರಿಸುವವರ ಸಂಘ ವ್ಯಗ್ರವಾಗುತ್ತದೆ. ಆದ್ದರಿಂದ ಕುಂಭಕರ್ಣನನ್ನು ಮಾಜಿ ಪ್ರಧಾನಿಗಳ ಅಧ್ಯಕ್ಷರ ಸಂಘಕ್ಕೆ ಮುಖ್ಯಸ್ಥರಾಗಿಸಲು ಮಾ.ಪ್ರ.ಸಂ. ಎಂದು ಟೈಪ್ ಮಾಡಿ ಎಸ್ಸೆಮ್ಮೆಸ್ ಮಾಡಿ; ರಾ.ಮು.ಮಂ. ಸಂಘಕ್ಕೆ ಅಧ್ಯಕ್ಷರಾಗಬೇಕೆಂದರೆ ರಾ.ಮು.ಮಂ. ಎಂದು ಟೈಪ್ ಮಾಡಿ ಎಸ್ಸೆಮ್ಮೆಸ್ ಮಾಡಿ; ಸ.ಕ.ನಿ.ಒ. ಮುಖ್ಯಸ್ಥನಾಗಬೇಕೆಂದರೆ ಸ.ಕ.ನಿ.ಒ. ಎಂದು ಟೈಪ್ ಮಾಡಿ ಎಸ್ಸೆಮ್ಮೆಸ್ ಮಾಡಿ; ಸ.ಸ.ತ.ನಿ.ಸಂ.ಗೆ ಅಧ್ಯಕ್ಷರಾಗಬೇಕೆಂದರೆ ಸ.ಸ.ತ.ನಿ.ಸಂ. ಎಂದು ಟೈಪ್ ಮಾಡಿ ಎಸ್ಸೆಮ್ಮೆಸ್ ಮಾಡಿ ಎಂದು ಸಾರ್ವಜನಿಕರಿಗೆ ಹೇಳಿದ್ದೇವೆ’’ ಎಂದರು ಗುಪ್ತಚಿತ್ತ.

‘‘ಲಾಸ್ಟ್ ಕ್ಯಾಂಡಿಡೇಟ್. ಇಲ್ಲಿಗೆ ಬಂದಿಲ್ಲ. ಅರ್ಜಿ ಇದೆ. ರಾಕ್ಷಸನ ಹೆಸರು ಭಸ್ಮಾಸುರ...’’

‘‘ಆಗಲೇ ಟ್ರಾನ್ಸ್‌ಫರ್ ಆಯ್ತಲ್ರೀ... ಕೂರಿಸಬಾರದವರನ್ನು ಅಧಿಕಾರದಲ್ಲಿ ಕೂರಿಸಿ, ಮತ ಹಾಕಿದುದಕ್ಕೆ ತಲೆಯ ಮೇಲೆ ಕೈಹೊತ್ತು ಕುಳಿತಿರುವ ರಾಜ್ಯದ ಜನತೆಯೇ ಭಸ್ಮಾಸುರನ ಈಗಿನ ಅವತಾರ. ಯಾವುದೋ ಸುಖದ ಕನಸು ಕಂಡು, ನೆಮ್ಮದಿಯ ಬೆನ್ನು ಹತ್ತಿ, ತಮ್ಮ ತಲೆಯ ಮೇಲೆ ತಾವೇ ಕೈಯಿಟ್ಟಿಕೊಂಡು ಸುಟ್ಟು ಸುಡುಗಾಡಾಗುತ್ತಿರುವುದು ಕಾಣಲಿಲ್ಲವೇ....’’ ನುಡಿದರು ಗುಪ್ತಚಿತ್ತ.

ಸಭೆ ಬರ್ಖಾಸ್ತಾಯಿತು. ▪

ವಿಚಾರ ವಿಹಾರ

ಮಾಲು, ಅಡಿಲೈಡ್

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನ ದಿನವು ಹೇ ದೇವ ದೇವ
ಎದೆಯ ಕಮಲಾಕರದಿ ನೀನು ಮೀಯುವೆಯೆಂದು
ಕಂಬನಿಯ ನವ ಜಲದಿ ದಿನವು ತೊಳೆವೆ

ಗುಡಿ

ಈ ಮೇಲಿನದು ಶ್ರೀ ಕು.ವೆಂ.ಪು ರವರ ಸುಂದರ ಕವಿತೆಯೊಂದರ ಸಾಲುಗಳು. ದೇಹವೆಂಬುದು ದೇವಸ್ಥಾನ. ಅದರೊಳಗಿನ ದೇವರು ಎಂದರೆ ಆತ್ಮನೇ. ಈ ನಮ್ಮ ದೇಹವೆಂಬ ದೇವಸ್ಥಾನವನ್ನು ಶುಚಿಯಾಗಿ ಇಡಬೇಕು, ಅದನ್ನು ಶಿಥಿಲವಾಗದಂತೆ ನೋಡಿಕೊಳ್ಳಬೇಕು.

ಆ ದೇವನ ದೇಹದ ದೇವಸ್ಥಾನವನ್ನು ನಾವು ಮಾಡಿರುವ ನಮ್ಮ ಅಪರಾಧಗಳ ಪಶ್ಚಾತಾಪದ ಕಣ್ಣೀರಿನಿಂದ ದಿನವೂ ಸ್ವಚ್ಛ ಗೊಳಿಸಬೇಕು.

ರಾಜಸಿಕ ತಾಮಸಿಕ ಪಾನಿಯಗಳಿಂದ, ರಾಜಸಿಕ ತಾಮಸಿಕ ಆಹಾರಗಳಿಂದ ಮತ್ತು ರಾಜಸಿಕ ತಾಮಸಿಕ ನಡವಳಿಕೆಯಿಂದ ಈ ನಮ್ಮ ಕಾಯದ ದೇವರ ಗುಡಿ ಕೆಡುತ್ತದೆ.

ಕ್ರೋಧ, ದ್ವೇಷ, ಲೋಭ ಮೊದಲಾದವುಗಳಿಂದಲೂ ನಿದ್ರಾ, ಆಲಸ್ಯ ಪ್ರಮಾದಗಳಿಂದಲೂ ಈ ನಮ್ಮ ದೇಹ ದೇವಾಲಯಕ್ಕೆ ಹಾನಿ ಉಂಟಾಗುತ್ತದೆ. ಕೋಪದಿಂದ ದೇಹದ ಮಾನಸಿಕ ಸ್ಥಿತಿ ಹದಗೆಡುತ್ತದೆ.

'ಯಾರ ಮೇಲಾದರೂ ಅತಿಯಾದ ಕೋಪ ಬಂದರೆ ಒಂದು ಲೋಟ ತಣ್ಣೀರು ಕುಡಿಯಿರಿ; ಅಥವಾ ಹತ್ತು ಸಲ ದೇವರ ಜಪ ಮಾಡಿ; ಇಲ್ಲವೇ ಒಂದು ಚಾಪೆ ಹಾಸಿ ಅದರ ಮೇಲೆ ಕೋಪ ಇಳಿಯುವವರೆಗೆ ಮಲಗಿ ಬಿಡಿ' ಎಂದು ಶ್ರೀ ಜಿ.ಪಿ.ರಾಜರತ್ನಂ ರವರು ತಮ್ಮ 'ವಿಚಾರ ರಶ್ಮಿ' ಯಲ್ಲಿ ಸಲಹೆ ಕೊಟ್ಟಿದ್ದಾರೆ.

ಕೋಪ ಕೆಟ್ಟದ್ದು. ಕೋಪ ಬಂದರೆ ಬಾಯಿಗೆ ಬಂದಂತೆ ಬಯ್ಯುತ್ತೇವೆ. ಬಯ್ಯಿಸಿಕೊಂಡವರು ಅವರೂ ಬಾಯಿಗೆ ಬಂದಂತೆ ಬಯ್ಯುತ್ತಾರೆ. ಇದರಿಂದ ಸಾಯುವವರೆಗೆ ಮನಸ್ತಾಪ ಉಂಟಾಗುತ್ತದೆ. ಐದು ನಿಮಿಷದ ಕ್ರೋಧವು ಐದು ತಲೆಮಾರಿನವರೆಗೂ ಜಿದ್ದು ಬೆಳೆಯಬಹುದು.

ಅಸ್ಥಿ ಪಂಜರದ ಈ ದೇಹವೇ ನಿಜವಾದ ಹಸ್ತಿನಾಪುರ. ನಮ್ಮ ಅಜ್ಞಾನವೇ ಈ ನಗರದೊಳಗಿನ ಕುರುಡು ದೊರೆ ಧೃತರಾಷ್ಟ್ರ. ನಮ್ಮ ಸುಜ್ಞಾನವೇ ಧರ್ಮ ರಾಜನಾದ ಯುಧಿಷ್ಠಿರ. ದೇವರ ದೇವನಾದ ಶ್ರೀ ಹರಿಯ ನಾಮಸ್ಮರಣೆಯಿಂದ ಮಾನವನ ಸಹಜ ಧರ್ಮಕ್ಕೆ ಜಯ ದೊರಕಲಿ. ಸುಮ್ಮನೆ ಹೊರಳುವ ನಾಲಿಗೆ ಭಗವಂತನ ಹೆಸರನ್ನು ಆಗಾಗ ಉಲಿಯುತ್ತಿರಲಿ.

ದೇಹಕ್ಕೆ ಸರಿಯಾದ ವ್ಯಾಯಾಮ ಬೇಕು. ಉತ್ತಮ ಆಹಾರ ಸೇವಿಸುವ ನಿಯಮ ಬೇಕು. ದೇಹವನ್ನು ಅಚ್ಚುಕಟ್ಟಾಗಿ ಇಡಲು ಶ್ರಮಿಸಬೇಕು. ಆರೋಗ್ಯಕರ ದೇಹದಲ್ಲಿ ಶಾಂತಿ ಸ್ಥೈರ್ಯಗಳು ಅಧಿಕವಾಗುತ್ತದೆ ಮತ್ತು ಆತ್ಮ ವಿಶ್ವಾಸ ಮೂಡುತ್ತದೆ. ಉತ್ತಮ ಮಾನಸಿಕ ಮತ್ತು ಧೈಹಿಕ ಸ್ಥಿತಿ ನಮಗೆ ಆನಂದವನ್ನು ತರುತ್ತದೆ. ನಾವು ಆನಂದವಾಗಿದ್ದರೆ ಇತರರನ್ನೂ ಆನಂದವಾಗಿಡಲು ಸುಲಭ ಸಾಧ್ಯ.

ಶ್ರೀ ಕು.ವೆಂ.ಪುರವರು ಆ ಮೇಲಿನ ಕವಿತೆಯಲ್ಲಿ ತಿಳಿಸಿದಂತೆ ನಮ್ಮ ದೇಹವನ್ನು ದಿನದಿನವೂ ಸ್ವಚ್ಛಗೊಳಿಸಬೇಕು. ದೇಹ, ಆತ್ಮ ಮತ್ತು ದೇವನ ಚಿಂತನೆ ನಮಗೆಲ್ಲ ನಿರಂತರವಾಗಲಿ.

ಸತ್ ಚಿತ್ ಆನಂದ ಸದಾ ನಮಗೆಲ್ಲ ದೊರಕಲಿ. ಸರ್ವೇ ಜನಾಃ ಸುಖಿನೋ ಭವಂತು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಸೌತ್ ಆಸ್ಟ್ರೇಲಿಯ ರಾಜ್ಯ ಪುಷ್ಪ – ಸ್ಟರ್ಟ್ ಡೆಸರ್ಟ್ ಪೀ

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ರಾಜ್ಯವೊಂದಾದ ಸೌತ್ ಆಸ್ಟ್ರೇಲಿಯದ ಪುಷ್ಪ ಲಾಂಛನವಾಗಿರುವ ಸ್ಟರ್ಟ್ ಡೆಸರ್ಟ್ ಪೀ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಸ್ವೇಯ್ನ್ಸೋನ ಫಾರ್ಮೋಸ"
- ಸುಮಾರು ೩೦ ಸೆಂಟಿಮೀಟರ್ ಎತ್ತರಕ್ಕೆ ಬೆಳೆಯುವ ಈ ಸಸ್ಯವು ಭೂಮಿಯ ಮೇಲೆ ಸಾಕಷ್ಟು ವಿಸ್ತಾರವಾಗಿ ಹರಡಿಕೊಂಡಿರುತ್ತದೆ
- ರೇಷ್ಮೆಯಂತಹ ಹಸಿರು-ಬೂದು ಬಣ್ಣದ ಎಲೆಗಳುಳ್ಳ ಈ ಸಸ್ಯವು ಟೊಮೇಟೊ ಎಲೆಗಳಲ್ಲಿರುವಂತೆ ಸಣ್ಣ ಸಣ್ಣ ರೋಮಗಳನ್ನು ಹೊಂದಿರುತ್ತದೆ
- ಸೌತ್ ಆಸ್ಟ್ರೇಲಿಯ ರಾಜ್ಯದ ಪುಷ್ಪ ಲಾಂಛನವಾಗಿ ನವೆಂಬರ್ ೨೩ ೧೯೬೧ ರಲ್ಲಿ ಅಂಗೀಕರಿಸಲಾಯಿತು.
- ವಿಕ್ಟೋರಿಯ ರಾಜ್ಯ ಹೊರತು ಪಡಿಸಿ ಬಹುತೇಕ ಎಲ್ಲೆಡೆ ಕಾಣಸಿಗುವ ಈ ಹೂಗಿಡವು ನಮ್ಮ ಬೆರಳುಗಳುದ್ದದಷ್ಟಿರುವ ಕೆಂಪು ಹೂವನ್ನು ಆರೆಂಟು ಗುಂಪುಗಳಲ್ಲಿ ಬಿಡುತ್ತವೆ
- ದಟ್ಟಕೆಂಪು ಹೂವಿನ ಮಧ್ಯಭಾಗದಲ್ಲಿ, ಮಿಂಚುವ ಕಪ್ಪುಬಣ್ಣದ ಉಬ್ಬಿರುವುದು ಈ ಹೂವಿನ ವೈಶಿಷ್ಟ್ಯ ▪

ಸ್ಟರ್ಟ್ ಡೆಸರ್ಟ್ ಪೀ ಹೂವಿರುವ ಒಂದು ಸ್ಟ್ಯಾಂಪ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ನಾಯಿ ಮತ್ತು ಮೊಲ

ಕನಕಾಪುರ ನಾರಾಯಣ

ನಾಯಿಯೊಂದು ಮೊಲವನ್ನು ಅಟ್ಟಿಸಿಕೊಂಡು ಓಡಿತು, ಮೊಲ ಬಹಳ ವೇಗವಾಗಿ ಓಡಿ ಕಣ್ ತಪ್ಪಿಸಿಕೊಂಡು ಮರೆಯಾಯಿತು. ಇದನ್ನು ನೋಡುತ್ತಿದ್ದ ಬೆಕ್ಕೊಂದು "ನಿನ್ನ ಕೈಯಲ್ಲಿ ಅಷ್ಟು ಸುಲಭವಾಗಿ ಓಡಲಾಗಲಿಲ್ಲ, ಅಬ್ಬ ಮೊಲ ಅದೆಷ್ಟು ವೇಗ !" ಎಂದು ಅಣುಗಿಸಿತು. ಅದಕ್ಕೆ ನಾಯಿ "ನೀನೇಕೆ ಆಶ್ಚರ್ಯಗೊಂಡಿದ್ದೀಯೆ, ನಾನು ಮೋಜಿಗೆ ಅಟ್ಟಿಸಿಕೊಂಡು ಹೋದೆ, ಆದರೆ ಅದು ಪ್ರಾಣ ಭೀತಿಯಿಂದ ಓಡಿತು" ಎಂದಿತು.

ನೀತಿ: ನಮ್ಮ ವರ್ತನೆಯು ಪರಿಸ್ಥಿತಿಗೆ ಅನುಗುಣವಾಗಿರುತ್ತದೆ. ▪

ಬದನೇಕಾಯಿ ಮೊಸರು ಗೊಜ್ಜು

ಬೇಕಾಗುವ ಸಾಮಗ್ರಿಗಳು

- ನಾಲ್ಕು ಉದ್ದವಾದ ಬದನೇಕಾಯಿಗಳು
- ಎರಡು ಬಟ್ಟಲು ಮೊಸರು
- ನಾಲ್ಕು ಹಸಿಮೆಣಸಿನ ಕಾಯಿ
- ಹಸಿ ಶುಂಟಿ ಸಣ್ಣ ತುಂಡು
- ಎರಡು ಚಮಚ ತುಪ್ಪ
- ಒಂದು ಚಮಚ ಉಪ್ಪು
- ವಗ್ಗರಣೆಗೆ ಸಾಸಿವೆ,ಕರಿ ಮೆಣಸು

ಮಾಡುವ ವಿಧಾನ

- ಬದನೇಕಾಯನ್ನು ಕೆಂಡದಲ್ಲಿ ಅಥವಾ ಗ್ಯಾಸ್ ಒಲೆಯ ಮೇಲೆ ಸುಟ್ಟು ಆರಿದ ಬಳಿಕ ಸಿಪ್ಪೆ ತೆಗೆಯಿರಿ
- ಅದನ್ನು ಒಂದು ದಪ್ಪತಳದ ಪಾತ್ರೆಯಲ್ಲಿ ಕಿವುಚಿ
- ಅದಕ್ಕೆ ಹಸಿಮೆಣಸಿನ ಕಾಯಿ,ಶುಂಟಿ ಅತಿ ಸಣ್ಣಗೆ ಕತ್ತರಿಸಿ ಉಪ್ಪು, ಮೊಸರು ತುಪ್ಪದಲ್ಲಿ ಒಣಮೆಣಸಿನಕಾಯಿ, ಸಾಸಿವೆ, ಮೆಣಸಿನ ವಗ್ಗರಣೆ ಹಾಕಿ, ಕಲಸಿ - ಬಡಿಸಿ

- ಗಮನಿಸಿ ಇದೇ ರೀತಿ ಬೇಯಿಸಿದ ಆಲೂಗಡ್ಡೆ,ಬಾಳೇಕಾಯಿ,ಗೆಣಸು,ಬೂದಕುಂಬಳಕಾಯಿ ಗಳಲ್ಲೂ ಮೊಸರು ಗೊಜ್ಜನ್ನು ಮಾಡಬಹುದು.

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರಲ್ಲೊಂದು ಒಗಟು

೧. ಮೂರಕ್ಷರದ ಈ ಪದವು, ನಾಶವಾಗುವುದ್ದನ್ನಲ್ಲ, ನಾವಿರುವ ಜಾಗವು ಇದೇ ಎಂದು ಕೇಳುತ್ತಿದೆ
೨. ಮೊದಲೆರಡಕ್ಷರವು ಒಂದು ಬಗೆಯ ಮರ
೩. ಕೊನೆಯೆರಡು ಕೂಡಿದರೆ ಮುಗಿದಂತೆಯೇ ಸರಿ
೪. ಮೊದಲಿನ ಅಕ್ಷರಕ್ಕೆ ಕೊನೆಯಕ್ಷರ ಸೇರಿಸಿದರೆ ಪೋಷಕರ ಬದಲು ನೋಡಿಕೊಳ್ಳುವ ಒಬ್ಬಾಕೆ

ಉತ್ತರಕ್ಕೆ ಪುಟ ೧೦ ನೋಡಿ

ಜೀವ ಗೀತ ...

ನನ್ನವನ ಹಾಡು ಕೊರಳಲ್ಲಿ
ಇನ್ನವನ ನೋಡುವುದೆ ಇರುಳಲ್ಲಿ
ಕಣ್ಣ ಕಣ್ಣ ಜೋಡಿಯಲಿ ಅಳಿವೆ
ಆ ಸಣ್ಣ ದನಿಯು ಹೊರಳಲ್ಲಿ

ಹಸಿ ಹುಲ್ಲ ಸವೆದ ಆ ಹುಲ್ಲೆಯಾಗಿ
ಹೊಸ ಬೆಲ್ಲವಾಗಿ ಆ ಭಲ್ಲೆಬಾಗಿ
ವಿಷ ವಿಲ್ಲವಾಗಿ ಯಶ ನಲ್ಲೆಯಾಗಿ
ಬಸಿದಿದ್ದು ಹುಸಿಯೆ ಆ ನೆರಳಲ್ಲಿ

ನಿಧಿ ಕೋಶದಲ್ಲಿ ಮುದ ಪಾಶದಲ್ಲಿ
ಆ ಭಾಷೆಯಲ್ಲಿ ಬದಿ ಆಶೆಯಲ್ಲಿ
ಹೊಸ ಕಾವು ಆಗಿ ಬೆಸ ನೋವು ಆಗಿ
ಸಸಿಯಾಯಿತಲ್ಲ ಮರಳಲ್ಲಿ

ಅಂದವಾಗಿ ಆ ಕಂದನಾಗಿ ಆನಂದವಾಗಿ
ಆ ಬಂಧುವಾಗಿ ಬಿಗಿ ಬಂಧವಾಗಿ
ಆ ಸಿಂಧುವಾಗಿ ಧೀ ಇಂದ್ರನಾಗಿ
ನಲಿವು ಆದ ಆ ಹೊಳವು ಆದ ಹರಳಲ್ಲಿ

ಆ ಮತ್ತು ಅವಗೆ ಈ ಮುತ್ತು ಇವಗೆ
ಹೊತ್ತು ಹೊತ್ತು ಆ ತುತ್ತು ನಮಗೆ
ಜೀವನವು ಶರಧಿ ಅದೆಕೆಲ್ಲಿ ಪರಧಿ
ಕರಗಿ ಕರಗಿ ನೀರಾಗಿ ಹರಿವೆ ಇರುಳಲ್ಲಿ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ೧೯೫೬ ರಲ್ಲಿ ಕರ್ನಾಟಕ ರಾಜ್ಯದ ರಚನೆಯಾದ ನಂತರ ಮೊದಲ ರಾಜ್ಯಪಾಲರಾಗಿ ನೇಮಕವಾದವರು ಯಾರು? ಈಗಿರುವ ರಾಜ್ಯಪಾಲರು ಎಷ್ಟನೆಯವರು?

೨. ಇದುವರೆಗಿನ ರಾಜ್ಯಪಾಲರಲ್ಲಿ ಅತ್ಯಂತ ದೀರ್ಘಕಾಲ ರಾಜ್ಯಪಾಲರ ಹುದ್ದೆಯಲ್ಲಿದ್ದವರು ಯಾರು? ಇವರ ಅಧಿಕಾರದ ಸಮಯ ಯಾವುದು?

ಸರಿ ಉತ್ತರಕ್ಕೆ ಪುಟ ೨೦ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಆಲಯ ೨. ಆಲ ೩. ಲಯ ೪. ಆಯ

ಹಾಸ್ಯ ಚಿಲುಮೆ

ಹುಡುಗ: ನೆನ್ನೆ ನಿಮ್ಮನೆಗೆ ಹೋಗಿದ್ದೆ...ನಮ್ ಮದ್ವೆ ಆಗೋದು ಡೌಟು

ಹುಡುಗಿ: ಯಾಕೆ? ನೀನು ನನ್ನಪ್ಪನ್ನ ಮೀಟ್ ಮಾಡಿದ್ಯಾ?

ಹುಡುಗ ; ಇಲ್ಲ.

ಹುಡುಗಿ:ನಂಮಮ್ಮನ್ನ ಮೀಟ್ ಮಾಡಿದ್ಯಾ ?

ಹುಡುಗ: ಇಲ್ಲ ನಿನ್ ತಂಗೀನ ಮೀಟ್ ಮಾಡ್ದೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಬೆರಳುಗಳಿಂದ ತಟ್ಟಿ ಅಣಿಮಾಡುವ ಉರುವಲಿನ ಮೂಲ ವಸ್ತು.

೨. ಈ ಹುಡುಗಿಯ ಧ್ವನಿ ಹರಿಯುವ ನೀರಿನಂತೆ ಸುಮಧುರವಿರಬಹುದೆ?

೩. ಪಾಪ ತೊಳೆಯುವವಳನ್ನು ತಲೆಯಮೇಲೆಯೇ ಕುಳ್ಳಿರಿಸಿಕೊಂಡಿರುವ ಈತ.

೪. ದೆಬ್ಬೆ ಕಟ್ಟಿದರೂ ನೆಟ್ಟಗಾಗದಿದು.

೫. "ನಿನಗೆ ಬೇಕಾದುದೇನು, ನನ್ನ ಒಲವೆ?" ಎಂದರೆ "ಬೇಡ, ಅದನ್ನು ನಡುವಲ್ಲಿ ಬದಲಾಯಿಸಿ ಕೊಡು" ಎಂದಳಲ್ಲಾ ಜಾಣೆ.

ಉತ್ತರ: ಮುಷ್ಕರ ಹೂಡುವ ಜಾಗವೇನಲ್ಲ ಇದು, ಇದರ ನಡುವಲ್ಲಿ ಮೆರೆಯುತ್ತಿದೆ ನಮ್ಮ ಕರ್ನಾಟ ದೇಶ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಫೆಬ್ರವರಿ ೨೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜನವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಅನು ಶಿವರಾಮ್, ಸಿದ್ದಿ
- ಪದ್ಮನಾಭ, ತುಮಕೂರು
- ಸ್ವಾತಿ, ಚಿಕ್ಕಮಗಳೂರು
- ಶ್ರೀಕಂಠ ಮೂರ್ತಿ, ಗುಬ್ಬಿ
- ಹರಿಣಿ ರಾವ್, ನವದೆಹಲಿ

ಜನವರಿ ತಿಂಗಳ ಪದಪುಂಜದ ಉತ್ತರ

೧. ಆಂಗ್ಲರ ಕಾನೂನಿನಲ್ಲಿ ಗಡಸುತನವಿಲ್ಲ ಎನ್ನುತ್ತಾಳೆ ಈ ಹುಡುಗಿ.

ಮೃ	ದು	ಲಾ

೨.ಅಂದವಾಗಿರುವ ಹುಡುಗಿ ಸದಾ ಬರುವುದಿಲ್ಲ.

ಅ	ಪ	ರೂ	ಪ

೩. ಒಟ್ಟಾಗಿ ಹುಟ್ಟಿದವರಲ್ಲಿ ಎರಡನೆಯವರು ಮಾಡುವ ಬಟ್ಟೆ ವ್ಯಾಪಾರ?

ಜ	ವ	ಳಿ

೪. ವೈಮನಸ್ಯದಿಂದ ಇಬ್ಬರ ನಡುವೆ ಹೊಗೆಯಾಡಲು ಕಾರಣ?

ಹ	ಗೆ	ತ	ನ

೫. ದ್ರವ್ಯ ರೂಪದಲ್ಲಿರದ ವಿಷ ಅತಿ ಭಯಂಕರ.

ಘ	ನ	ಫೋ	ರ

ಉತ್ತರ: ಹಾಲಾಹಲದೊಡನೆಯೇ ಬಂದುದಕ್ಕೆ ಸುಸಮಯವೇ ಇದು.

ಅ	ಮೃ	ತ	ಘ	ಳಿ	ಗೆ	

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಢಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ಕುಂದಣಮಯವಾದ ರಂಗೋಲಿಯಲ್ಲಿ ಅನಂತನ ಗಂಟು ೧೫ ಚುಕ್ಕೆ, ೧೫ ಸಾಲು

ರಚನೆ: ಶ್ರೀಮತಿ ರಶ್ಮಿ ಸೋಮಶೇಖರ್, ಬೆಂಗಳೂರು

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಸಿಹಿ ನೋವು

ನಿನ್ನ....
ಹೂ ನಗೆ ಚೆಲ್ಲುವ
ಮುದ್ದು ಮುಖ:
ನನ್ನ....
ಎದೆಯ ಮೇಲಿಟ್ಟು ನೋಡು
ಹೃದಯದ ಗಾಯಗಳಿಗೆ
ಔಷಧಿಯಾಗಬಹುದೇನು ?
ಇಲ್ಲವೆ....
ಹಳೆ ನೋವ ಮರೆಯಲು
ಹೊಸದೊಂದು....
ಸಿಹಿ ನೋವ ಕೊಡಬಲ್ಲದೇನು ?

ಕಾತುರತೆ

ಪಕೃತಿಯ ವಿಕೋಪಕ್ಕೆ
ಸಿಕ್ಕಿರುವ ಲಾತೂರ್ ನಂತೆ;
ಗುರುದ್ವಾರದಲ್ಲಿ
ನಡೆದ ದುರಂತ ಕತೆಯಂತೆ;
ವಿಷ ಅನಿಲಕ್ಕೆ ತತ್ತರಿಸಿದ
ಭೂಪಾಲ ನಗರದಂತೆ;
ಮೀಸಲಾತಿ ವಿವಾದಕ್ಕೆ
ಸಿಕ್ಕಿದ ಗುಜರಾತಿನಂತೆ;
ನರಕವಾಗುತ್ತಿರುವ
ಕಾಶ್ಮೀರದಂತೆ;
ಸದ್ದಿಲ್ಲದೇ ಕುಸಿದ....
ಗಂಗಾರಾಮ್ ಕಟ್ಟಡದಂತೆ;
ನನ್ನತನ - ನನ್ನ ಈ ಯೌವನ
ನನ್ನಿಂದ ಕುಸಿಯುವ ಮುನ್ನ
ನೀ ನನ್ನವಳಾಗು ಚಿನ್ನ !!

ನಮ್ಮೂರ ಸಂತೆ

ಸ್ಮಿತಾ ಮೇಲ್ಕೋಟೆ

ಮೊನ್ನೆ ತರಕಾರಿ ಕೊಳ್ಳಲೆಂದು ನಮ್ಮೂರ ಫ್ಲೆಮಿಂಗ್ಟನ್ ವಾರದ ವೆಜಿಟಬಲ್ ಮಾರ್ಕೆಟ್ ಅಲ್ಲಲ್ಲ ಫ್ಲೆಮಿಂಗ್ಟನ್ ಸಂತೆಗೆ ಹೋಗಿದ್ದೆ. ಏನು ಸಿಕ್ಕಾಪಟ್ಟೆ ಜೋರು ಶಬ್ದ, ಎಲ್ಲಿ ನೋಡಿದರಲ್ಲಿ ದೊಡ್ಡ ದೊಡ್ಡ ಟ್ರಾಲಿ ಗಾಡಿಗಳ ತುಂಬಿದ ಸೊಪ್ಪು, ಹಣ್ಣು ಮತ್ತು ತರಕಾರಿಗಳು, ಜನ ಜಂಗುಳಿ, ಹಣ್ಣು ತರಕಾರಿಗಳ ಬೆಟ್ಟ ಒಂದು ಕ್ಷಣ ಈ ಗಲಾಟೆ ಅನುಭವವೇ ನನ್ನನ್ನು ಎಲ್ಲಿಗೋ ಕರೆದುಕೊಂಡು ಹೋಗಿಬಿಟ್ಟಿತು. ಹತ್ತು ಡಾಲರ್... ಹತ್ತು ಡಾಲರ್... ಕೊನೆ ಬಾಕ್ಸ್ ಅಂತ ಕೂಗಿ ಕೂಗಿ ಕರೆಯುತಿದ್ದ ಮಾವಿನ ಹಣ್ಣಿನ ವರ್ತಕ ಗಿರಾಕಿಗಳನ್ನು ಸೆಳೆಯಲು ಮಾಡುತಿದ್ದ ಪ್ರಯತ್ನ ನನ್ನನ್ನು, ಬಾಲ್ಯದಲ್ಲಿ ಹೋಗುತ್ತಿದ್ದ ಹಾಸನ ಜಿಲ್ಲೆಯ ರಾಮನಾಥಪುರದ ಪುಟ್ಟ ಗ್ರಾಮದ ಸಂತೆಯ ನೆನಪಿನ ತೆಕ್ಕೆಗೆ ತಳ್ಳಿತ್ತು.

ಸಂತೆ ಅಂದರೆ ನನಗೆ ನೆನಪಿಗೆ ಬರುವುದು, ದೇವರ ರಥೋತ್ಸವ, ಅಂಗಡಿಗಳ ಸಾಲು, ಬಣ್ಣಬಣ್ಣದ ಬಳೆ ಸರ ನೇತುಹಾಕಿದ ದೃಶ್ಯ, ಐಸ್ ಕ್ಯಾಂಡಿ, ಪುರಿ ಬೆಟ್ಟ, ಹೆಚ್ಚೆಟ್ಟ ಹಣ್ಣುಗಳು, ದೂರದೂರಿಂದ ಬಂದ ರೈತರು, ಇಲ್ಲಿಂದಲ್ಲಿಗೆ ವೇಗದಿಂದ ಓಡಾಡುವ ಜನರು, ಮಕ್ಕಳ ಸಂತೋಷದ ಕೇಕೆ, ನಗು. ಏನೋ ಸಂಭ್ರಮ ತುಂಬಿ ತುಳುಕುತ್ತಿದ್ದ ವಾತಾವರಣ. ಕೊಯ್ಲು ಮಾಡಿದ ಬಳಿಕ ಅದೇ ತಾನೇ ಸಂತೆಗೆ ಬಂದ ತಾಜಾ ಹಣ್ಣುಗಳು, ಹೂವು ಮತ್ತು ತರಕಾರಿಗಳು ಅದೆಂತಾ ಸುವಾಸನೆ ಬೀರುತಿದ್ದವು. ಪ್ಲಾಸ್ಟಿಕ್ ನಿಂದ ಮುಚ್ಚಿರದ, ಬ್ರಾಂಡ್ ಹೆಸರು ಗಿಸರು ಇಲ್ಲದ ತಾಜಾಮಾಲು. ಆದರೆ ಇಲ್ಲಿ ಸಿಗುವ ಯಾವ ಹಣ್ಣುಗಳ ವಾಸನೆಯೂ ಅದ್ಯಾಕೋ ಅಷ್ಟು ತಾಜಾ ಅನಿಸುವುದಿಲ್ಲ, ಆದರೆ ನೋಡಲು ಮಾತ್ರ ದಷ್ಟ ಪುಷ್ಟವಾಗಿ ಬಣ್ಣಬಣ್ಣವಾಗಿ ಮನ ಸೆಳೆಯುತ್ತವೆ. ಒಂದೊಂದು ಮಾವಿನ ಹಣ್ಣು ಸುಮಾರು ಅರ್ಧ ಅಥವಾ ಮುಕ್ಕಾಲು ಕೇಜಿ ತೂಗುತ್ತವೆ. ಸ್ಥಳೀಯಯವಾಗಿ ಬದಲಾಯಿಸಿ ಬೆಳೆದ ಹಣ್ಣುಗಳು ಮತ್ತು ತರಕಾರಿಗಳು ಇಲ್ಲಿಯ ವಿಶೇಷ. ಆದರೆ ಪರಿಮಳ ಅಷ್ಟೊಂದಿಲ್ಲ.

ಎಲ್ಲಾ ಕಾಲದಲ್ಲೂ ಎಲ್ಲಾ ಸೀಸನ್ ಹಣ್ಣುಗಳು ದೊರೆಯುತ್ತವೆ. ಇನ್ನೆಲ್ಲೋ ಬೆಳೆದ ತರಕಾರಿಗಳು ನಮಗೆ ಕೋಲ್ಡ್ ಸ್ಟೋರೇಜ್ ಮೂಲಕ ಹಾರಿ ಬಂದಿರುತ್ತವೆ, ಆ ಹಾರಿದ ಸಮಯದಲ್ಲಿ ಅದರ ನೈಜ ವಾಸನೆ ಮತ್ತು ಬಣ್ಣ ಕಳೆದುಕೊಂಡಿರುತ್ತವೆ. ಅದನ್ನು ನೈಜವಾಗಿ ಕಾಣಲು ಅದೆಷ್ಟು ರಾಸಾಯನಿಕ ಸ್ಪ್ರೇ ಹೊಡೆದಿರುತ್ತಾರೋ ದೇವರೇ ಬಲ್ಲ.

ಇಲ್ಲಿಯ ಸಂತೆ ಮತ್ತು ನಮ್ಮೂರ ಹಳ್ಳಿಯ ಸಂತೆಗೆ ಒಂದೇ ಹೋಲಿಕೆ ಏನಪ್ಪಾ ಅಂದ್ರೆ ಜೋರಾಗಿ ಕೂಗುವ ವರ್ತಕರು, ತಮ್ಮ ಸರಕು ಬೇಗ ಮಾರಾಟ ಆದ್ರೆ ಸಾಕಪ್ಪ ಎಂಬ ಮುಖಭಾವ, ಅದೇ ಸಂತೆಯ ಜನ ಜಂಗುಳಿ..

ಇಲ್ಲಿನ ಸಂತೆಗಳಲ್ಲಿ ಕೆಲವು ಸಿದ್ದ ಪಡಿಸಿದ ಆಹಾರಗಳೂ ದೊರೆಯುತ್ತವೆ. ತರಕಾರಿ ಕೊಂಡು ಅಲ್ಲೇ ಕೂತು ತಿಂಡಿ ತಿಂದು ಕಾಫಿ ಕುಡಿದು ಕೂಡ ಬರಬಹುದು. ನಿರಾಳವಾಗಿ ಕೂತು, ಹರಟೆ ಹೊಡೆಯುತ್ತಾ ತಿನ್ನುವ ಜನರ ನೋಡುವುದು ಕೂಡ ಒಂದು ವಿಶೇಷ ದೃಶ್ಯವೇ.

ಇಲ್ಲಿಯ ಸಂತೆಗಳಲ್ಲಿ, ತರಕಾರಿ ಮತ್ತು ಹಣ್ಣು ಜೊತೆಗೆ ಬಟ್ಟೆ ಬರೆ, ದಿನ ನಿತ್ಯಕ್ಕೆ ಬೇಕಾದ ಇನ್ನೂ ಎಷ್ಟೋ ಸರಕುಗಳು ಕೂಡ ಮಾರಟಕ್ಕೆ ಇರುತ್ತವೆ. ವಿದ್ಯುತ್ ಉಪಕರಣಗಳ ಬಿಡಿ ಭಾಗಗಳು, ಫರ್ನಿಚರ್, ಪಾತ್ರೆ ಪಗಡಿಗಳು, ಕಾರ್ಪೆಟ್ ಗಳು ಹೀಗೆ ಬಹಳ ವೈವಿಧ್ಯಮಯ ಸಂತೆ.

ಹೂವಿನ ಮಂಡಿ ಕೂಡ ಬಹು ಆಕರ್ಷಕ, ಅದನ್ನು ವಿಧ ವಿಧವಾಗಿ ಜೋಡಿಸಿ ಮಾರುವ ಅವರುಗಳ ಕೌಶಲ್ಯ ಮೆಚ್ಚುವಂತಹದ್ದೆ. ಒಂದೊಂದು ಬಾರಿ ಬಣ್ಣಕ್ಕೆ ಮಾರುಹೋಗಿ, ಕೊಂಡು ತಂದ ಹಣ್ಣುಗಳ ರುಚಿ ಅಷ್ಟಕಷ್ಟೇ. ಕೆಲವು ಹಣ್ಣಿನ ಅಂಗಡಿಗಳಲ್ಲಿ ತಿಂದು ರುಚಿ ನೋಡಿ ಕೂಡ ಕೊಳ್ಳಬಹುದು. ಬೆಳಿಗ್ಗೆ ಬೇಗ ಹೊರಟರೆ ಸಂತೆಯಲ್ಲೇ ಫಲಹಾರ ಮುಗಿಸಬಹುದು.

ಈಗೆಲ್ಲಾ ಜನರ ಮನ ಸೆಳೆಯಲು ಮತ್ತು ಮಾರಲು ಏನು ಬೇಕಾದರೂ ಮಾಡ್ತಾರೆ. ಅತ್ಯಾಕರ್ಷ ಪ್ಯಾಕೇಜಿಂಗ್, ಅನುಕೂಲಕ್ಕೆ ತಕ್ಕ ಹಾಗೆ ಹೆಚ್ಚೆ ಒಂದು ಬಾರಿ ತಿಂದು ಎಸೆಯುವ ಬಾಕ್ಸ್ಗಳು. ಜನರ ವಯಕ್ತಿಕ ಅಗತ್ಯಗಳನ್ನು ಅರಿತ ಮಾರಾಟಗಾರರು, ವಿಧವಿಧವಾದ ಟಿನ್ ದಬ್ಬದಲ್ಲಿನ ಆಹಾರಗಳು, ಬ್ರಾಂಡ್ಗಳು ಬಂದಾಯಿತು.

ಮಾಲ್ ಸಂಸ್ಕೃತಿ ನಮ್ಮ ಭಾರತಕ್ಕೆ ಬಂದ ನಂತರ ಸಂತೆ ಎಂಬ ಪದವೇ ಹೇಳ ಹೆಸರಿಲ್ಲದಂತೆ ನಶಿಸುತ್ತಿದೆಏನೋ ಎಂದು ಇಷ್ಟೆಲ್ಲಾ ಸಿದ್ದಿ ಮಾರ್ಕೆಟ್ ಬಗ್ಗೆ ಯೋಚಿಸಿ ನಿಂತಿದ್ದ ನನಗೆ ಒಂದು ದೊಡ್ಡ ಟ್ರಾಲಿ ಡಿಕ್ಕಿ ಹೊಡೆದು, ಮತ್ತೆ ಈ ಲೋಕಕ್ಕೆ ಬರುವ ಹಾಗೆ ಮಾಡಿತು! ▪



ನೀಳ್ಗಥೆ

ರಾಮನ ಮಹಡಿ ಬಸ್ಸಿನ ಕನಸು

ಲೇಖಕರು:
ನಾಗಶೈಲ ಕುಮಾರ್

ಮಹಡಿ ಬಸ್ಸಿನಲ್ಲಿ ಪ್ರಯಾಣ ಮಾಡಬೇಕೆಂಬ ಬಯಕೆ ರಾಮನ ಮನಸ್ಸಿನಲ್ಲಿ ಬಲವಾಗಿ ಬೇರೂರಿತ್ತು. ಕರೆದು ಕೊಂಡು ಹೋಗಲು ನಾನೇನೋ ಸಿದ್ದನಿದ್ದೆ. ಆದರೆ ರಾಮನಿಗೆ ಅವನದೇ ಆದ ತೊಂದರೆಯೊಂದಿತ್ತು....



ರಚನೆ: ಕು. ಮಾನಸ ಗಣೇಶ್

"ರಾಮಾ, ಏ ರಾಮಾ, ಎಲ್ಲಿದ್ದೀಯೋ, ಎಲ್ಲಿ ಹಾಳಾಗೋದ್ನೋ ಈ ರಾಮ. ಮಧ್ಯಾಹ್ನ ಊಟವಾದಾರಭ್ಯ ಕಾಣುಸ್ತಾನೆ ಇಲ್ಬೆ ಇವ್ನು." ಹೊತ್ತು ಕಳೆದಂತೆ ಅಜ್ಜಿಯ ಪರದಾಟ ಆರಂಭವಾಗಿತ್ತು.

" ಅಯ್ಯೋ ಎಲ್ಲಿ ಹೋಗ್ತಾನೆ ಬಿಡಜ್ಜಿ, ರಾಮಾಂಜಿನಿ ಜೊತೇನೋ ವಸೂರನ ಜೊತೇನೋ, ಆಡಕ್ಕೆ ಹೋಗಿರ್ತಾನೆ ಬಿಡು," ಅಜ್ಜಿಗೆ ಸಮಾಧಾನ ಹೇಳಿದೆ.

"ಅವನಿಗೇನಂತೆ ಆಡ್ದೀರ ಇರಕ್ಕೆ, ಆದ್ರೆ ನಿಮ್ಮ ತಾತ ಬಂದು ಮೊದಲು ಕೇಳೋದೇ ಅವನನ್ನ. ಕೊಟ್ಟಿಗೇಲಿ ಮೇವು ಹಾಕಿದ್ನಾ, ಹಿಂಡಿ ಬೆರೆಸಿ ಕಲಗಚ್ಚು ಇಟ್ನಾಯ್ತಾ, ನೀರೊಲೆಗೆ ತರಗು ತುಂಬಿದೆಯಾ ಅಂತ ಒಂದೊಂದೇ ವಿಚಾರಿಸ್ತಾರೆ. ಅದ್ಯಾವ್ದೂ ಆಗಿಲ್ಲ, ರಾಮನೂ ಎದುರ್ಗಿಲ್ಲ ಅಂದ್ರೆ ನನ್ನ ಗ್ರಾಚಾರ ಬಿಡಿಸ್ತಾರೆ", ಅಜ್ಜಿಯ ಆತಂಕ ಹೆಚ್ಚಾಗಿತ್ತು.

"ಅಜ್ಜಿ ಇರಜ್ಜಿ, ನಾನು ಹೋಗಿ ಹುಡ್ಕೊಂಡು ಬರ್ತೀನಿ", ಎಂದು ನಾನೇ ಹೋಗಿ ಅವನ ಸ್ನೇಹಿತರನ್ನೆಲ್ಲಾ ವಿಚಾರಿಸಿಕೊಂಡು ಬಂದೆ. ಎಲ್ಲೂ ರಾಮನ ಪತ್ತೆಯಿಲ್ಲ. ಕಡೆಗೆ ಅಜ್ಜಿಯೇ ರಾಮನ ಪಾಲಿನ ಕೆಲಸವನ್ನೆಲ್ಲಾ ಮಾಡತೊಡಗಿದರು. ಜೊತೆಗೆ ನಾನೂ ಹೋದೆ.

"ಅಪ್ಪನೆ, ನಾನಿದನ್ನೆಲ್ಲಾ ನೋಡಿಕೊಳ್ತೀನಿ, ನೀನು ಒಂಚೂರು ಒಲೆ ಉರಿ ನೋಡಿಬಿಡು. ಬಂದು ಸ್ನಾನ ಮಾಡಬೇಕು, ಮೈಲಿಗೆ ಆಗಿರುತ್ತೆ ಅಂತ ನಿಮ್ಮ ತಾತ ಹೇಳಿದ್ದಾರೆ."

ಅದೇನೋ ಆ ದಿನಗಳಲ್ಲಿ ಏನೇ ಕೆಲಸವಾಗಲಿ ಮಾಡುವ ಉತ್ಸಾಹ. ರಜಾ ದಿನಗಳಲ್ಲಿ ಕಳೆಯುತ್ತಿದ್ದ ಹಳ್ಳಿಯ ಜೀವನದಲ್ಲಿ ತಣಿಯದ ಕುತೂಹಲವಿರುತ್ತಿತ್ತು. ನೀರು ಕಾಯಿಸುವುದೂ ಒಂದು ಸಂತೋಷದ ವಿಷಯವೇ. ನೀಲಗಿರಿ ಮತ್ತು ಸರ್ವೇ ಮರದ ತುರಗು, ಕಬ್ಬಿನ ಸಿಪ್ಪೆಗಳನ್ನು ಹಾಕಿ ಒಲೆ ಧಗಧಗನೆ ಉರಿಸುವುದು ಒಂದು ರೀತಿಯ ಮೋಜು. ನೀರು ಚೆನ್ನಾಗಿ ಕಾದ ಮೇಲೆ ಎಷ್ಟು ಸುರಿದುಕೊಂಡರೂ ಕೇಳುವವರಿಲ್ಲ.

ಸರಿ, ಒಲೆಯೊಳಗೆ ಚೆನ್ನಾಗಿ ಕಬ್ಬಿನ ಸಿಪ್ಪೆಯನ್ನು ತುಂಬಿ, ಮೊದಲೇ ಇದ್ದ ಕೆಂಡವನ್ನು ಊದುಗೊಳವಿಯಿಂದ ಹತ್ತಿಸಿ ಒಲೆ ಉರಿಯುವುದನ್ನೇ ನೋಡುತ್ತಾ ಕುಳಿತೆ.ಇದ್ದಕ್ಕಿದ್ದಂತೆ ಗುರ್ರ್ ಗುರ್ರ್ ಎಂಬ ಸದ್ದು ಕೇಳಿ ಬಂತು. ಒಲೆ ಮೊರೆಯುತ್ತಿರಬಹುದೆಂದುಕೊಂಡೆ, ಆದರೆ ಒಲೆಯೊಳಗೆ ನಾನು ತೆಂಗಿನ ಕರಟವನ್ನೇನೂ ಹಾಕಿರಲಿಲ್ಲ. ಒಲೆಯೊಳಗೆ ಬಗ್ಗಿ ನೋಡಿದೆ, ಚಿಪ್ಪೇನೂ ಕಾಣಲಿಲ್ಲ. ಗುರ್ರ್ ಗುರ್ರ್ ಶಬ್ದ ಮುಂದುವರೆದಿತ್ತು. ಸರಿಯಾಗಿ ಗಮನಿಸಿದೆ, ಸದ್ದು ಬರುತ್ತಿದ್ದುದು ಒಲೆಯಿಂದಲ್ಲ. ಗಾಬರಿಯಾಯಿತು. ಸುತ್ತಮುತ್ತಲೂ ನೋಡಿದೆ, ಯಾವುದಾದರೂ ಪ್ರಾಣಿ ಇರಬಹುದೇನೋ ಎಂದುಕೊಂಡೆ. ಎದ್ದು ಓಡಿ ಹೋಗಲು ಸಿದ್ದನಾದವನು ಬಚ್ಚಲು ಮನೆಯ ಮತ್ತೊಂದು ಬದಿಗಿದ್ದ ಒಣಹುಲ್ಲಿನ ಕಡೆ ಬಗ್ಗಿ ನೋಡಿದೆ....., ಹುಲ್ಲಿನ ನಡುವೆ ರಾಮ ಸುಖವಾಗಿ ಗೊರಕೆ ಹೊಡೆಯುತ್ತಾ ಪವಡಿಸಿದ್ದ.

"ಅಜ್ಜೀ, ಅಜ್ಜೀ ಬಾ ಇಲ್ಲಿ," ಕೂಗುತ್ತಾ ಓಡಿದೆ, ಅಜ್ಜಿ ಓಡಿ ಬಂದವರು ರಾಮನ ಶಯನೋತ್ಸವ ಕಂಡು ಕೆಂಡಾಮಂಡಲ ಕೋಪ ತಾಳಿ, ಸೊಂಟಕ್ಕೆ ಸೆರೆಗು ಕಟ್ಟಿ ಒಲೆಯ ಬದಿಯಲ್ಲಿ ಕೈಗೆ ಸಿಕ್ಕಿದ ಸರ್ವೆ ಕಡ್ಡಿಯನ್ನು ತೆಗೆದು ಕೊಂಡು " ಕಳ್ಳ ಕೊರಮ, ನಾವು ಊರೆಲ್ಲಾ ಹುಡುಕ್ತಾ ಇದ್ರೆ, ಮೈಮೇಲೆ ಜ್ಞಾನ ಇಲ್ಲದೆ ಇಲ್ಲಿ ಬಿದ್ದಿರೋದು ನೋಡು," ಎಂದು ರಾಮನನ್ನು ವಿಚಾರಿಸಿಕೊಳ್ಳಲು ಸಿದ್ಧರಾಗುತ್ತಿದ್ದಂತೆ, ಮುಂಬಾಗಿಲಿನಿಂದ ತಾತನ ಸೈಕಲ್ ಬೆಲ್ಲಿನ ಸದ್ದಾಯಿತು. "ನಿಮ್ಮ ತಾತ ಬಂದೇ ಬಿಟ್ರು, ನಾನು ಬೀದಿ ಬಾಗಿಲು ತೆಗೀತೀನಿ ನೀನು ಅವ್ನನ್ನ ಎಬ್ಸಿಕೊಂಡು ಬಾ", ಎನ್ನುತ್ತಾ ಅಜ್ಜಿ ಅವಸರದಲ್ಲಿ ಹೊರ ನಡೆದರು.

ಮುಂದಿನ ಪುಟ ನೋಡಿ ...

ರಾಮನನ್ನು ಎಬ್ಬಿಸಿ ನಾನೂ ಅಜ್ಜಿಯ ಹಿಂದೆ ಓಡಿದೆ. ಸೈಕಲ್ ನಿಂದ ತಾತ ತಂದಿದ್ದ ಚೀಲಗಳನ್ನು ಇಳಿಸಿಕೊಳ್ಳುತ್ತಿದ್ದಂತೆ ಹಿಂದೆ ರಾಮನೂ ಬಂದು ನಿಂತ. ನಾನೂ, ಅಜ್ಜಿಯೂ, ಇನ್ನು ತಾತನಿಂದ ಬೈಗಳ ಸುರಿಮಳೆ ಆರಂಭ ಎಂದು ಕಾಯುತ್ತಿದ್ದರೆ, ರಾಮನನ್ನು ನೋಡಿದ ತಾತ ಜೋರಾಗಿ ನಗಲಾರಂಭಿಸಿದರು. "ಅಲ್ವೋ, ಕೊಟ್ಟಿಗೆಗೆ ಹುಲ್ಲು ಹಾಕು ಅಂದ್ರೆ ನಿನ್ನ ಮೈಮೇಲೆ ಸುರ್ಕೊಂಡಿದ್ದೀಯಲ್ಲೋ, ಚೆನ್ನಾಗಿದೆ ನಿನ್ನ ಅವತಾರ". ಆಶ್ಚರ್ಯ ಚಕಿತರಾಗಿ ಅಜ್ಜಿ ನಾನು ರಾಮನೆಡೆ ನೋಡಿದರೆ, ಮೈ ತುಂಬಾ ಹುಲ್ಲು ಮೆತ್ತಿಕೊಂಡ ರಾಮ ಇರುವಷ್ಟೂ ಹಲ್ಲು ತೋರಿಸಿಕೊಂಡು ನಗುತ್ತಾ ನಿಂತಿದ್ದ. ಅಜ್ಜಿ ನಿಟ್ಟುಸಿರು ಬಿಟ್ಟು ನನ್ನ ಕಡೆ ನೋಡಿ ಸಮಾಧಾನದ ನಗೆ ನಕ್ಕರು.

****

ನನಗಿಂತ ಸುಮಾರು ನಾಲ್ಕು ವರ್ಷಗಳಷ್ಟು ಚಿಕ್ಕವನಾದ ರಾಮ ತಾತನ ಮನೆಗೆ ಬಂದು ಸರಿಯಾಗಿ ವರ್ಷವಾಗಿತ್ತು. ಕಳೆದ ವರ್ಷದ ದಸರಾ ರಜಾದಲ್ಲೂ ನಾನು ಊರಿಗೆ ಬಂದಿದ್ದೆ. ಹೀಗೇ ಹಳ್ಳಿಗೆ ಹೋಗಿದ್ದ ತಾತ ಹಿಂದಿರುಗಿ ಬಂದಾಗ ಯಥಾಪ್ರಕಾರ ತರುತ್ತಿದ್ದ ಪೌರೋಹಿತ್ಯದ ಸಾಮಾನುಗಳ ಜೊತೆಗೆ ಮತ್ತೊಂದು ಅಚ್ಚರಿಯ ವಸ್ತುವೂ ಸೇರಿಕೊಂಡಿತ್ತು.

ಅದುವೆ ಸೈಕಲ್ ಹಿಂದಿನ ಕ್ಯಾರಿಯರ್ ಮೇಲೆ ಕುಳಿತ್ತಿದ್ದ ಪುಟ್ಟ ಹುಡುಗ. ಅಜ್ಜಿ ಆಸೆಯಿಂದ ಗೋಡೆಯಲ್ಲಿ ಹಾಕಿಕೊಂಡಿದ್ದ ಹಳೆಯ ಕ್ಯಾಲೆಂಡರ್ ನಲ್ಲಿದ್ದ ಮುದ್ದು ಮುದ್ದಾದ ಮಗುವಿನಂತೇ ಇದ್ದ ಮುಖ, ಆದರೆ ಬಣ್ಣ ಮಾತ್ರ ತೊಳೆದ ಕೆಂಡ. ಸುಂದರ ದಂತಪಂಕ್ತಿ, ಚುರುಕಾದ ಕಣ್ಣುಗಳು, ಕೆನ್ನೆಯಲ್ಲಿನ ಗುಳಿ, ಯಾರಿಗಾದರೂ ಸರಿ ಈ ಕೂಸನ್ನು ಮುದ್ದಿಸಬೇಕೆನಿಸುವಂತಿತ್ತು.

ಒಂಟಿಯಾಗಿದ್ದ ನನಗೆ ಜೊತೆ ದೊರೆತ ಸಂತೋಷವಾಯಿತು. ಆದರೆ ಅಜ್ಜಿಯ ಮುಖ ಬಿಗುವಾಗಿಯೇ ಇತ್ತು. " ಎಲ್ಲಿಂದ ಗಂಟು ಬಿದ್ದ ನಿಮಗೆ ಈ ಕಾಠೀಮರಾಯನು? ಬೇಸಿ ಹಾಕಕ್ಕೆ ಇವನೊಬ್ಬ ಬಾಕಿ ಇದ್ನೇನೋ ನನಗೆ", ಎಂದು ಸಿಡುಕಿದರು.

ತಾತ ಅಜ್ಜಿಯ ಕೋಪಕ್ಕೆ ಬೆಲೆಕೊಡದೆ ನಗುತ್ತಲೇ " ನಾನು ಹೋಗಿದ್ದ ಹಳ್ಳಿಯ ಶಾಲೆಯ ಮೇಷ್ಟರೊಬ್ಬರು ಇವನನ್ನು ಕರೆದುಕೊಂಡು ಹೋಗಲು ಕೇಳಿಕೊಂಡರು, ಆ ಊರಿನ ಬಳಿಯ ತಾಂಡಾದಲ್ಲಿ ಎಲ್ಲರ್ಗಿಂತ ಚುರುಕಾದ, ಬುದ್ಧಿವಂತನಾದ ಈ ಹುಡುಗನಿಗೆ ಯಾರಾದರೂ ಸರಿಯಾಗಿ ವಿದ್ಯೆ ಕಲಿಸುವವರು ಬೇಕು ಅದಕ್ಕೆ ನೀವೇ ಸರಿ ಅಂತ ನೀವಿಲ್ಲಿ ಬರೋದನ್ನೇ ಕಾಯ್ತಾ ಇದ್ವಿ ಅಂದ್ರು. ಸರಿ ಅಂತ ಅವರಮ್ಮ ಅಪ್ಪನ್ನ ಒಪ್ಪಿಸಿ ಕರ್ಕೊಂಡು ಬಂದಿದ್ದೀನಿ. ಅವನು ಇನ್ಮೇಲೆ ಇಲ್ಲೇ ಇರ್ತಾನೆ, ಅದಕ್ಕೆ ಏನು ಬೇಕೋ ಏರ್ಪಾಡು ಮಾಡು" ಎಂದು ತಾತ ಮಾತು ಮುಗಿಸಿದರು.

"ಹೂಂ, ಕರ್ಕೊಂಡು ಬಂದಾಗ ನಿಮಗೆ ಎಲ್ಲ ಸರಿಯಾಗೇ ಇರುತ್ತೆ. ಆಮೇಲೆ ಒದ್ದಾಡೋಳು ನಾನ್ ತಾನೆ," ಎಂದು ಅಜ್ಜಿ ಗೊಣಗಿಕೊಳ್ಳುತ್ತಿದ್ದಂತೆ ಆ ಹುಡುಗ ಅಜ್ಜಿಯ ಕಾಲಿಗೆ ದೂರದಿಂದಲೇ ಉದ್ದಂಡ ನಮಸ್ಕಾರ ಮಾಡಿದ. ಅಜ್ಜಿಯ ಮುಖ ಕೊಂಚ ಸಡಿಲವಾಯಿತು. "ಮೊದ್ಲು ಸ್ನಾನ ಮಾಡು ನಡಿ, ಆ ನಿನ್ನ ಬಟ್ಟೆ ತೆಗೆದುಹಾಕು, ನಮ್ಮ ಹುಡುಗುರ್ದೆ ಯಾವ್ದಾದ್ರು ಬಟ್ಟೆ ಕೊಡ್ತೀನಿ," ಎನ್ನುತ್ತಾ ಒಳ ನಡೆದರು.

ನಂತರದ ದಿನಗಳಲ್ಲಿ ಕೆಲವು ವಿಷಯಗಳಲ್ಲಿ ಅವನಿಗೆ ನಾನು ಶಿಷ್ಯನಾದರೆ, ಮತ್ತೆ ಕೆಲವು ವಿಷಯಗಳಲ್ಲಿ ಅವನು ನನಗಾದ. ಮತ್ತೆ ವರ್ಷದ ನಂತರ ಬರುವ ವೇಳೆಗೆ ಅವನ ಭಾಷೆ, ನಡೆ ನುಡಿಗಳಲ್ಲಿ ಸಾಕಷ್ಟು ಸುಧಾರಣೆಯಾಗಿತ್ತು. ಜೊತೆಗೆ ಓದುಬರಹವೂ ಸಾಗಿತ್ತು. ತನ್ನ ಮುಗ್ಧ ಮನಸ್ಸಿನಿಂದ ಅಜ್ಜಿ ತಾತನ ಮನಸ್ಸನ್ನೂ ಗೆದ್ದಿದ್ದ. ಮುಂಜಾವಿನಿಂದ ಸಂಜೆಯವರೆವಿಗೂ ಕತ್ತೆಯಂತೆ ದುಡಿಯುತ್ತಿದ್ದ ಅವನಿಗೆ ಯಾವಾಗಲೆಂದರೆ ಆವಾಗ, ಎಲ್ಲೆಂದರಲ್ಲಿ, ನಿದ್ರಾದೇವಿಯ ಅವಾಹನೆಯಾಗುತ್ತಿತ್ತು, ಮಲಗಿದ ಕ್ಷಣಗಳಲ್ಲೆ ಗೊರಕೆ ಆರಂಭವಾಗುತ್ತಿತ್ತು.

ಅಂದು ಸಂಜೆ ಕೆರೆಯ ಏರಿಯ ಮೇಲೆ ಕಬ್ಬನ್ನು ಸವಿಯುತ್ತಾ ಬರುತ್ತಿರುವಾಗ ರಾಮ ಕೇಳಿದ,

"ಅಣ್ಣ ನಿಮ್ಮೂರಾಗೆ ಎಲ್ಲಾ ಕಡೆ ಗುಂಡಿ ಒತ್ತಿದ್ದಂಗೆ ದೀಪ ಬತ್ತೆತಂತೆ ಔದ್ರಾ?"

"ಹೌದು, ಅದಕ್ಕೆ ಸ್ವಿಚ್ ಅಂತಾರೆ".

"ಅಣ್ಣ ನಿಮ್ಮನ್ಯಾಗೆ ಎಲ್ಲಾ ಕಡೇಗೂ ಕೊಳ್ವಿ ಐತ್ರಾ?,

"ಹಾಗಂದ್ರೇನೋ?"

"ಅದೆ ಅಣ್ಣಾ, ಬಚ್ಲು, ಅಡ್ಗೆ ಕೋಣೆ ಎಲ್ಲಾ ಕಡ್ಯಾಗೂ ಪೈಪ್ ತಿರುಗ್ಸಿದ್ರೆ ನೀರ್ ಬರ್ತಾದಂತೆ ಔದ್ರಾ?"

"ನಲ್ಲಿ ಕಣೋ ಅದು, ಬೆಳಗ್ಗೆ, ಸಂಜೆ ಕಾರ್ಪೋರೇಷನ್ನವರು ಟ್ಯಾಂಕ್ನಿಂದ ನೀರು ಬಿಡ್ತಾರೆ, ಆವಾಗ ಮನೇಲೂ ಬರುತ್ತೆ".

ರಾಮನ ಕುತೂಹಲದ ಮುಗ್ಧ ಪ್ರಶ್ನೆಗಳಿಗೆ ಕೊನೆಯೇ ಇರುತ್ತಿರಲಿಲ್ಲ.

"ಅಣ್ಣಾ ನೀವು ಮೋಟ್ರುನಾಗೆ ದಿನಾ ಓಗ್ತೀರಾ?" ಅವನ ಭಾಷೆಯಲ್ಲಿ ಮೋಟ್ರು ಅಂದ್ರೆ ಬಸ್ಸೆಂದು ನನಗಾಗಲೇ ತಿಳಿದಿತ್ತು.

"ದಿನಾಗ್ಲೂ ಒಡಾಡಲ್ಲ, ಮೆಜೆಸ್ಟಿಕ್ಕಿಗೋ, ಮಾರ್ಕೆಟ್ಟಿಗೋ ಹೋಗ್ಬೇಕಾದ್ರೆ ಬಸ್ಸಲ್ಲಿ ಹೋಗ್ತೀವಿ".

" ಅಣ್ಣೋ, ವಸಿ ತಡೀರಿ, ಎಲ್ಲೋಗ್ಬೇಕಾದ್ರೆ ಅಂದ್ರಿ ನೀವು?."

"ಮೆಜೆಸ್ಟಿಕ್ಕು, ಮಾರ್ಕೆಟ್ಟು".

"ಅದೆಂತದ್ದಣ್ಣ ಮೆಸ್ಸೆಸಿಕ್ಕು ಅಂದ್ರೆ, ಇನ್ನೊಂದೇನೋ ನಮ್ ಬಳ್ಳಾಪುರ್ದಾಗಿನ್ ಪ್ಯಾಟೆ ತರ ತಾನೇನೆ?"

ನನಗೆ ನಗು ತಡೆಯಲಾಗಲಿಲ್ಲ, "ಮೆಜೆಸ್ಟಿಕ್ ಅಂದ್ರೆ ಅದೂ ಕೂಡ ಪೇಟೇ ತರಾನೆ ಒಂದು ಜಾಗ ಕಣೋ".

ಮುಂದಿನ ಪುಟ ನೋಡಿ ...

"ಅಣ್ಣಾ, ಎಂಗಾರ ಸರಿ ನಾನೊಂದ್ ಕಿತ ಆ ಮೋಟ್ರುನಾಗೆ ವೋಗ್ಬೇಕು, ಮತ್ತೆ ಒಂದ್ಕಿತ ಬೆಂಗ್ಳೂರ್ ಪ್ಯಾಟೆ ನೋಡ್ಬೇಕು. ನಾ ಸಾಯೊದ್ರಾಗೆ ಇದೆರ್ಡೂನೂವೆ ಆಗ್ತದಾ ಇಲ್ವಾ ಅಂದ್ಕೊಂಡೀನ್ನಿ". ರಾಮನ ಮಾತು ಕೇಳಿ ನನಗಾಶ್ಚರ್ಯವಾಯಿತು.

ಬೆಂಗಳೂರನ್ನು ನೋಡುವುದೇ ಒಂದು ದೊಡ್ಡ ವಿಷಯ, ಮತ್ತೆ ಅಲ್ಲಿಗೆ ಹೋಗುವುದು ಎಷ್ಟು ಕಷ್ಟ ಎಂಬ ಮಾತೇ ನನಗೆ ಸೋಜಿಗವೆನಿಸಿತ್ತು.

ಮಗನನ್ನು ನೋಡಿಕೊಂಡು ಹೋಗಲು ರಾಮನ ತಾಯಿ ಮತ್ತು ಅವನ ಅಜ್ಜಿ ಆಗಾಗೆ ನಮ್ಮ ಊರಿಗೆ ಬರುತ್ತಿದ್ದರು.

ಬಣ್ಣ ಬಣ್ಣದ ಕುಸುರಿ, ಮಣಿ ಹಾಗೂ ಗಾಜಿನ ಕಸೂತಿ ಕೆಲಸದ ಬಟ್ಟೆಗಳು, ದಪ್ಪನಾದ ಮಣ್ಣು ಮತ್ತು ಗಾಜಿನಿಂದ ಮಾಡಿದ ಬಳೆ, ಕಡಗಗಳು, ಕಿವಿಯ ಆಭರಣ, ಬೆಳ್ಳಿಯ ಕಾಲ್ಗೆಜ್ಜೆ, ಕೈ ತುಂಬಾ ಹಚ್ಚೆ, ಹೀಗೆ ಅವರ ಉಡುಗೆ ತೊಡುಗೆಗಳೇ ನನಗೆ ಒಂದು ಆಕರ್ಷಣೆಯಾಗಿರುತ್ತಿತ್ತು. ಅವರ ಮಾತುಗಳನ್ನು ಅರ್ಥಮಾಡಿಕೊಳ್ಳಲಾಗದೆ ಅಜ್ಜಿಯ ಮೊರೆ ಹೋಗುತ್ತಿದ್ದೆ. ಅವರು ಬಂದಾಗ ಬುಟ್ಟಿಯ ತುಂಬಾ ತರುತಿದ್ದ ಬಗೆಬಗೆ ಕಾಡುಹಣ್ಣುಗಳಂತೂ ಅದೇನು ರುಚಿ. ಅಜ್ಜಿ ಉಗ್ರಾಣದ ಮಡಕೆಗಳಲ್ಲಿ ತುಂಬಿಸಿಡುತ್ತಿದ್ದ ತಿಂಡಿಗಳಂತೇ, ಈ ಹಣ್ಣುಗಳು ಕೂಡ ಬಾಯಲ್ಲಿ ನೀರೂರಿಸುತ್ತಿದ್ದವು.

ನಮ್ಮೂರ ಕೆರೆ ಏರಿಯ ಮೇಲೆ ನಿಂತಾಗ ದೂರದಲ್ಲಿ ಕಾಣುತ್ತಿದ್ದ ಸಣ್ಣ ಸಣ್ಣ ಗುಡ್ಡಗಳ ಸಾಲಿನ ನಡುವೆ ರಾಮನ ಹಿರಿಯರ ತಾಂಡಾಗಳಿದ್ದವು. ಅವುಗಳನ್ನು ಉಳುಕಡಿ ಬೆಟ್ಟಗಳೆಂದು ಹೇಳುತ್ತಿದ್ದ ನೆನಪು. ದೊಡ್ಡಬಳ್ಳಾಪುರ, ಘಾಟಿ ಸುಬ್ರಹ್ಮಣ್ಯಗಳಿಗೆ ಹೋಗುವಾಗ ಇವರು ಹೆಚ್ಚಾಗಿ ಕಾಣುತ್ತಿದ್ದರು. ಊರಿಂದೂರಿಗೆ ಅಲೆದಾಡುತ್ತಾ, ಗುಡಾರಗಳನ್ನು ಹಾಕಿಕೊಂಡು, ಕುರುಚಲು ಕಾಡಿನ ಉತ್ಪನ್ನಗಳಾದ ಬಿದಿರು, ಜೇನು, ಒಣಗಿದ ಕಟ್ಟಿಗೆಗಳನ್ನು ಮಾರಿಕೊಂಡು ಜೀವನ ನಡೆಸುತ್ತಿದ್ದರು ರಾಮನ ಜನರು. ಅವರು ತಯಾರಿಸುತ್ತಿದ್ದ ಬುಟ್ಟಿಗಳು, ಕರಕುಶಲ ವಸ್ತುಗಳು ಹೆದ್ದಾರಿಯ ಬದಿಯಲ್ಲಿ ಮಾರಾಟವಾಗುತ್ತಿದ್ದವು.

ಅವರ ಬಣ್ಣಬಣ್ಣದ ವಸ್ತ್ರಗಳು, ಅವರ ತಿರುಗಾಟದ ಜೀವನ ಶೈಲಿಯಿಂದಾಗಿ, ಅವರ ಬಗ್ಗೆ ನನಗೆ ಕುತೂಹಲ ಹಾಗೂ ಆಕರ್ಷಣೆ, ಎರಡೂ ಇತ್ತು. ಆಗ ನಾನೆಷ್ಟು ಮೋಡಿಗೊಳಗಾಗಿದ್ದೆನೆಂದರೆ, ಅವರು ಮನೆಗೆ ಬಂದಾಗಲೆಲ್ಲ ತಾತ ಅವರಿಗೆ, ಅಕ್ಕಿ, ರಾಗಿ, ಬೆಲ್ಲ ಇತ್ಯಾದಿ ಆಹಾರ ಪದಾರ್ಥಗಳನ್ನು ನೀಡಲು ಹೇಳುತ್ತಿದ್ದರು. ನಾನು ತಾತ ಹೇಳಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಾಗೇ ಅವರ ಚೀಲಕ್ಕೆ ಹಾಕುತ್ತಿದ್ದೆ.

ಅಂದು ರಾಮ ಹೇಳಿದ ಮಾತುಗಳನ್ನು ಕೇಳಿದ ಮೇಲೆ ಅವನನ್ನು ಬೆಂಗಳೂರಿನಲ್ಲಿ ನಮ್ಮ ಮನೆಗೆ ಕರೆದುಕೊಂಡು ಹೋಗಿ, ಅವನಿಗೆ ಊರನ್ನು ತೋರಿಸಬೇಕೆಂಬ ಆಸೆಯುಂಟಾಯಿತು. ರಾತ್ರಿ ಊಟವಾದ ಮೇಲೆ ತಾತನ ಬಳಿ ರಾಮನ ಮಾತುಗಳನ್ನು ತಿಳಿಸಿ, ಉಪಾಯದಿಂದ, ರಾಮನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಲು ಒಪ್ಪಿಗೆ ಪಡೆದೆ. ಅಜ್ಜಿಯ ಕುಮ್ಮಕ್ಕಿನಿಂದ ಆ ಕೆಲಸ ಸಲೀಸಾಗೇ ಆಯಿತು.

ಆದರೆ ಕೇವಲ ಒಂದು ದಿನದ ಅವಕಾಶ ಮಾತ್ರ ದೊರಕಿತ್ತು. ಶುಕ್ರವಾರ ಮದ್ಯಾಹ್ನ ಹೊರಟು ಶನಿವಾರ ರಾಮನಿಗೆ ಬೆಂಗಳೂರು ತೋರಿಸಿ, ಭಾನುವಾರ ಹಿಂದಿರುಗಿ ಕಳುಹಿಸುವುದೆಂದು ಮಾತಾಯಿತು.

ರಾಮನಿಗೆ ವಿಷಯ ತಿಳಿಸಿದಾಗ, ಕೊಂಚಕಾಲ ಮಾತೇ ಬಾರದ ಮೂಗನಂತಾಗಿ ಬಿಟ್ಟ. ಕೆಲ ಸಮಯದ ನಂತರ,

"ಅಣ್ಣ, ನೀವು ಯೇಳೋದು ದಿಟ್ವೇನಣ್ಣ. ನನ್ನ ದಿಟವಾಗ್ಲು ನಿಮ್ಮೂರಿಗ್ ಕರ್ಕೊಂಡ್ ಓಗ್ತೀರಾ? ಆಮ್ಮಣ್ಣೋರು, ತಾತಾವ್ರುನು ಒಪ್ಕಂಡವ್ರಾ? ಅಮ್ಯಾಕೆ ನಿಮ್ಮನ್ನ ಬೈಯ್ಯಾಕಿಲ್ಲ ತಾನೆ".

"ಹೌದು ಕಣೋ ರಾಮ ಅವರೊಪ್ಕೊಂಡಿರೋ ಹೊತ್ಗೆ ನಿನ್ನ ಕರ್ಕೊಂಡ್ ಹೋಗ್ತಿರೋದು".

"ಅಣ್ಣ ನಾನೇನೋ ನಿಮ್ತಾವ ಮಾತಾಡ್ತ ಏನೇನೋ ಯೋಳ್ಬುಟ್ಟೆ, ನೀವ್ಯಾಕ್ರಣ್ಣ ಅದನ್ನ್ನ ತಾತಾವ್ರಿಗ್ ಹೇಳಿದ್ರಿ. ನಂಗ್ಯಾಕೋ ಭಯ್ವಾಗ್ತಿದೆ".

"ಭಯ್ವೂ ಇಲ್ಲ, ಎಂತದ್ದೂ ಇಲ್ಲ ಸುಮ್ನೆ ಇರು. ಬೆಂಗ್ಳೂರ್ ನೋಡೋ ಆಸೆ ಇದ್ಯೋ ಇಲ್ವೋ ನಿಂಗೆ", ನಾನು ಗದರಿದ ಮೇಲೆ ರಾಮ ಸುಮ್ಮನಾದ.

****

ಮಾರನೆಯ ದಿನವೇ ಶುಕ್ರವಾರ. ಕಿವಿಯ ಬಳಿ ತಮಟೆ ಹೊಡೆದರೂ ಎಚ್ಚರವಾಗದಂತೆ ನಿದ್ದೆ ಹೊಡೆಯುವ ರಾಮ ರಾತ್ರಿಯೆಲ್ಲ ನಿದ್ರೆ ಮಾಡದೆ ಹೊರಳಾಡಿದ್ದ. ಅಜ್ಜಿ ತಾತ ಹೇಳುವ ಮೊದಲಿರಲಿ, ಏಳುವ ಮೊದಲೇ ದನಕರುಗಳ ಹೊರಗೆ ಕಟ್ಟಿ, ಕೊಟ್ಟಿಗೆಯನ್ನು ಶುಚಿಗೊಳಿಸಿ, ಹೊರಗೆಲ್ಲಾ ಕಸಗುಡಿಸಿ, ಒಲೆಗೆ ಉರುವಲು ತುಂಬಿಸಿದ್ದ. ಸ್ನಾನವನ್ನೂ ಮುಗಿಸಿ, ಒಗೆದ ಬಟ್ಟೆ ತೊಟ್ಟು, ಹಣೆಗೆ ಧಾರಾಳವಾಗಿ ವೀಭೂತಿ ಪಟ್ಟೆಯೆಳೆದು ನಡುವಲ್ಲಿ ಕುಂಕುಮದ ಬೊಟ್ಟಿರಿಸಿ, ಹನ್ನೊಂದೂವರೆಯ ಬಸ್ಸಿಗೆ, ಬೆಳಗ್ಗೆ ಏಳು ಗಂಟೆಗೇ ತಯಾರಾಗಿ ನಿಂತಿದ್ದ.

ತಾತ ಬಸ್ ಟಿಕೆಟಿಗೆಂದು ನನಗೆ ಅರವತ್ತೈದು ಪೈಸೆ ಅವನಿಗೆ ಅರವತ್ತೈದು ಪೈಸೆ ಕೈಯ್ಯಲ್ಲಿಟ್ಟು, ಒಂದು ಐದು ರೂಪಾಯಿ ನೋಟನ್ನು ನನ್ನ ಕೈಗೆ ಕೊಟ್ಟು, ಅವನ ಹಿಂದಿರುಗುವ ಟಿಕೆಟ್ ಮತ್ತು ಬೆಂಗಳೂರಿನಲ್ಲಿ ಅವನಿಗೆ ಏನಾದರೂ ಕೊಡಿಸಲು ತಿಳಿಸಿದರು.

ಮುಂದಿನ ಪುಟ ನೋಡಿ ...

ಅಜ್ಜಿ ಬಡಿಸಿದ ಊಟ ಮುಗಿಸಿ ಅರ್ಧಗಂಟೆ ಮುಂಚೆತವಾಗಿಯೇ ಊರ ಮುಂದಿನ ಬಸ್ಟ್ಯಾಂಡ್ ಗೆ ಬಂದು ಕಾಯತೊಡಗಿದೆವು. ಊರಾಚೆಗಿನ ಕೆರೆಯ ಏರಿಯ ಮೇಲೆ, ಬಳ್ಳಾಪುರದ ಕಡೆಯಿಂದ ಬರುವ ನ್ಯಾಷನಲ್ ಎಕ್ಸ್ಪ್ರೆಸ್ ಬಸ್ಸಿನ ಸದ್ದು ಕೇಳತೊಡಗಿದಾಗ, ಅದರ ಮಾಮೂಲಿ ಸಮಯಕ್ಕಿಂತ ಒಂದು ಗಂಟೆ ತಡವೇ ಆಗಿತ್ತು. ಬಸ್ಸಿನಲ್ಲಿ ಸಾಕಷ್ಟು ಜಾಗವಿದ್ದು, ರಾಮನನ್ನು ಕಿಟಕಿಯ ಪಕ್ಕದಲ್ಲಿ ಕೂಡಿಸಿ ನಾನು ಅವನ ಬದಿಗೆ ಕುಳಿತೆ.

ಜೀವನದಲ್ಲಿ ಪ್ರಥಮ ಬಾರಿಗೆ ಬಸ್ಸಿನಲ್ಲಿ ಕುಳಿತ ರಾಮನ ಮುಖ ಉದ್ವೇಗ, ಭಯ, ಆಶ್ಚರ್ಯ, ಸಂತೋಷ ಹೀಗೆ ಅನೇಕ ಭಾವನೆಗಳ ಸಂಗಮವಾಗಿತ್ತು. ತಾನು ಕುಳಿತ ಸೀಟನ್ನೇ ಸವರುತ್ತಾ ರಾಮ " ಎಷ್ಟು ಮೆತ್ತಗೆ , ನುಣ್ಣಗೆ ಐತಣ್ಣೋ ಈ ಕುರ್ಚಿ. ಕಿಟಕಿಗೆ ಗಿಲಾಸ್ ಎಲ್ಲಾ ಆಕವ್ರೆ? ಅಣ್ಣಾ ಅದ್ಯಾಕ ಅಷ್ಟೊಂದ್ ದೇವ್ರ ಪಟ ಮಡ್ಕಂಡವ್ರೆ". ರಾಮನ ಪ್ರಶ್ನೆಗಳ ಸರಮಾಲೆ ಆರಂಭವಾಗಿತ್ತು.

"ಆಣ್ಣಾ ಇಲ್ಲಿಂದ ಬೆಂಗ್ಳೂರು ಎಷ್ಟ್ ದೂರ?"

"ಮೂವತ್ತು ಮೈಲಿ ಆಗಬಹುದು",

“ಹೌದ್ರಾ, ಅಯ್ಯಬ್ಬಾ! ಅಂದ್ರೆ ನಮ್ಮೂರ ಕೆರೆ ಏರಿಗಿಂತ್ಲೂ ದೂರ?”

“ಹೌದೋ, ಹೌದು”.

“ಅಂಗಂದ್ರೆ ಎಷ್ಟು ಪರ್ಲಾಂಗಣ್ಣ?’

“ ಸ್ವಲ್ಪ ಬಾಯ್ಮುಚ್ಕೊಂಡ್ ಕೂತ್ಕೊಳ್ಳೊ”

ರಾಮ ಸುಮ್ಮನಾಗಿ ಕಿಟಕಿಯಲ್ಲಿ ಹೊರನೋಡ ತೊಡಗಿದ. ಜೋರಾಗಿ ಬೀಸುತ್ತಿದ್ದ ಗಾಳಿಗೆ ಮುಖಕೊಟ್ಟು ಆನಂದಿಸಿದ

“ಅಣ್ಣಾ ಅಣ್ಣಾ ಅಣ್ಣಾ,...”

“ ಮತ್ತೆ ಏನೋ ಅದು”?

“ಅಣ್ಣಾ ಮರಗಳು, ಮನೆಗ್ಳು ಎಲ್ಲಾ ಹಿಂದಕ್ಕೋಯ್ತಾ ಐತೆ, ಮತ್ತೆ ಜನಗೋಳ್ ಕೂಡ!”.

“ಅಯ್ಯೋ ಅದು ಬಸ್ಸು ಮುಂದಕ್ಕೆ ಹೋಗ್ತಾ ಇರೋದ್ರಿಂದ ಹಾಗನ್ಸುತ್ತೆ ಅಷ್ಟೆ, ಅವೆಲ್ಲಾ ಇರೋ ಕಡೇನೆ ಇವೆ.”

“ಅಣ್ಣಾ ಇನ್ನೂ ಎಷ್ಟೊತ್ತಾಯ್ತದೆ ಬೆಂಗ್ಳೂರ್ಗೆ?’

“ಇನ್ನೂ ಎರಡು ಗಂಟೆ”

“ಅಷ್ಟೊಂದಾ, ವಸಿ ಬಿರ್ ಬಿರ್ನೆ ಓಗಿದ್ರೆ ಚೆನ್ನಾಗಿರೋದ್ ಅಲ್ಲವ್ರಾ”

ನನಗೂ ಹಾಗೇ ಅನ್ನಿಸಿತ್ತು. ಆದರೆ ದಾರಿಯುದ್ದಕ್ಕೂ ಜನ ಕೈ ತೋರಿಸಿದ ಕಡೆಯೆಲ್ಲಾ ನಿಲ್ಲಿಸುತ್ತಾ, ಹೂವು, ಹಣ್ಣುಗಳು, ತರಕಾರಿ, ಹುಣಿಸೇ ಹಣ್ಣು, ಹಲಸಿನ ಕಾಯಿ, ಇನ್ನೂ ಏನೇನೋ ಮಕ್ಕರಿಗಳು, ಮೂಟೆಗಳನ್ನೆಲ್ಲಾ ತುಂಬಿಸಿಕೊಳ್ಳುತ್ತಾ ಬಸ್ಸು ಆಮೆಗತಿಯಲ್ಲೆ ಸಾಗಿತ್ತು. ಮಧುರೆ, ಗೊಲ್ಲಹಳ್ಳಿಗಳನ್ನು ದಾಟಿ ಬಸ್ಸನ್ನು ನೆಲಮಂಗದಲ್ಲಿ ಅರ್ಧಗಂಟೆ ನಿಲ್ಲಿಸಿದಾಗ, ರಾಮನ ಚಡಪಡಿಕೆ ಹೆಚ್ಚಾಗಿತ್ತು. ಅವನನ್ನು ಸಮಾಧಾನಪಡಿಸಲು ಸೌತೇಕಾಯಿ, ಕಡಲೇಕಾಯಿ ಕೊಡಿಸಿದೆ.

ಅಂತೂ ಇಂತೂ ಯಶವಂತಪುರ ದಾಟಿ ಮನೆಯಬಳಿ ಇಳಿಯುವಾಗ ಅವನ ಉತ್ಸಾಹ ಹೇಳತೀರದು.

“ಅಣ್ಣೋ, ಬಂದೇ ಬಿಡ್ತಾ ನಿಮ್ಮೂರು, ಎಷ್ಟು ಬಿರನೆ ಸಿಕ್ತಣ್ಣೋ, ಅಷ್ಟ್ ದೂರ ಬಂದದ್ದು ತಿಳಿಲೇ ಇಲ್ಲ”.

“ನಿನ್ ತಲೆ, ಇಷ್ಟೊತ್ತು ಒಂದೇ ಸಮ ತಲೆ ತಿಂದೆ, ನಡಿ ನಡಿ”

ನಮ್ಮ ಮನೆಯಲ್ಲಿ ಅವನಿಗೆ ಪ್ರೀತಿಯ ಸ್ವಾಗತ ಸಿಕ್ಕಿತ್ತು, ಅಮ್ಮ ಅವನಿಗಾಗಿ ಮುದ್ದೆ ಮಾಡಿದರು. ಎಲ್ಲರೂ ಅವನ ಬಳಿ ಊರ ವಿಷಯ ಕೇಳುವವರೆ, ಅವನ ಬಾಯಿಗೆ ಪುರುಸೊತ್ತೇ ಸಿಗಲಿಲ್ಲ.

“ಅಣ್ಣಾ, ಅದೆ ಆ ಕೊಳ್ವಿ ಎಲ್ಲೈತಣ್ಣ”

“ತೋರುಸ್ತೀನಿ ಬಾ, ಹಾಗೆ ಕೈ ಕಾಲು ಮುಖ ತೊಳ್ಕೊಂಡು ಊಟ ಮಾಡು”, ನನಗೂ ಅವನಿಗೆ ಎಲ್ಲಾ ಸೋಜಿಗಗಳನ್ನು ತೋರಿಸಲು ಅವನಷ್ಟೇ ಆತುರವೂ ಇತ್ತು. ಅಂಗಳದ ನಲ್ಲಿಯ ಬಳಿ ಕರೆದುಕೊಂಡು ಹೋದೆ, “ಇದೇ ನೋಡು ನಲ್ಲಿ”.

“ನೀರೆಲ್ಲೈತಣ್ಣ”,

“ಈ ಹಿಡಿನಾ ತಿರುಗಿಸಿದರೆ ಬರುತ್ತೆ”,

“ಈ ಸಣ್ಣ ಕೊಳ್ವಿನಲ್ಲಿ ಅದೆಂಗಣ್ಣಾ ನೀರ್ ಬತ್ತೈತೆ” ಅನುಮಾನಸ್ಪದವಾಗಿ ನಲ್ಲಿ ಸುತ್ತಲೂ ನೋಡಿದ.

ನಲ್ಲಿ ತಿರುಗಿಸಿದೆ, ದಬದಬನೆ ನೀರು ಸುರಿಯಿತು. ರಾಮ ಮುಖ ಮೊರದಗಲವಾಯಿತು “ ಬಾ, ಕೈ ಹಿಡಿ” ಎಂದೆ. ನೀರಿಗೆ ಕೈಯ್ಯೊಡ್ಡಿದ. “ ಓ ತಣ್ಣಗೈತಣ್ಣ”, ಎರಡೂ ಕೈಗಳನ್ನು ಸುರಿಯುತ್ತಿರುವ ನೀರಿಗೆ ಹಿಡಿದ. ಮುಖಕ್ಕೆ ಎರಚಿಕೊಂಡ, ಬೊಗಸೆ ತುಂಬಾ ಹಿಡಿದು ಕುಡಿದ. “ಅಣ್ಣಾ, ಎಂಥಾ ಸೀ ಐತಣ್ಣೋ, ಬೆಲ್ಲದ್ ನೀರ್ ಇದ್ದಂಗೈತೆ”.

ಮುಂದಿನ ಪುಟ ನೋಡಿ ...

"ಔದು ಇಂಥಾ ಸೀಗಿರೋ ನೀರು ಎಲ್ಲಿಂದ ಬತ್ತದಣ್ಣ, ನಿಮ್ಮನ್ಯಾಗೆ ಕೆರೆ, ಕುಂಟೆ, ಬಾವಿ ಯಾವ್ದಿಲ್ಲ?"

"ಇದೂ ಕೆರೆ ನೀರೆ, ಹೆಸರಘಟ್ಟ, ತಿಪ್ಪಗೊಂಡನ ಹಳ್ಳಿ ಕೆರೆ ನೀರು ಟ್ಯಾಂಕ್ ಗೆ ತುಂಬಿ, ಆ ಮೇಲೆ ಮನೆಗೆ ಬಿಡ್ತಾರೆ, ಇರು ಊಟ ಆದ್ಮೇಲೆ ಕರ್ಕೊಂಡ್ ಹೋಗಿ ಟ್ಯಾಂಕ್ ತೋರಿಸ್ತೀನಿ".

ನಂತರ ಮನೆಯ ಬಳಿಯಿದ್ದ ಟ್ಯಾಂಕ್ ಹತ್ತಿರ ಕರೆದುಕೊಂಡು ಹೋದೆ. ತಿಪ್ಪಗೊಂಡನಹಳ್ಳಿಯಿಂದ ನೀರು ಹರಿದು ಬರುವ ದೊಡ್ಡ ಪೈಪುಗಳು, ಮತ್ತೆ ಹೊರಹೋಗುವ ಪೈಪುಗಳನ್ನುತೋರಿಸಿ ನನಗೆ ತಿಳಿದಷ್ಟು ವಿವರಿಸಿದೆ. ಟ್ಯಾಂಕ್ ಇರುವ ಗುಡ್ಡದ ಮೇಲೆ (ಈಗ ಇಸ್ಕಾನ್ ದೇವಾಲಯವಿರುವ ಜಾಗ) ಕೆಲವರು ಕ್ರಿಕೆಟ್ ಆಡುತ್ತಿದ್ದರು, ಮತ್ತೆ ಕೆಲವರು ಗಾಳಿಪಟ ಹಾರಿಸುತ್ತಿದ್ದರು. ಅಲ್ಲಿಂದಲೇ ಅವನಿಗೆ ದೂರದಲ್ಲಿ ಕಾಣುತ್ತಿದ್ದ ನಂದಿ, ಶಿವಗಂಗೆ, ಸಾವನ ದುರ್ಗ ಬೆಟ್ಟಗಳನ್ನು ತೋರಿಸಿದೆ. ಅದನ್ನೆಲ್ಲಾ ನೋಡುತ್ತಾ ರಾಮ ಮಂತ್ರಮುಗ್ಧನಂತೆ ನಿಂತಿದ್ದ.

"ಅಣ್ಣಾ ನಿಮ್ಮೂರು ಸಾನೆ ಸಂದಾಕ್ಕೈತಣ್ಣೋ, ನಾಳೆ ಪ್ಯಾಟೆ ತೋರುಸ್ತೀನಿ ಅಂದ್ರಲ್ಲ, ಅಲ್ಲಿಗೆ ಎಂಗ್ರಣ್ಣ ಓಗೋದು?"

"ಬಸ್ಸಲ್ಲೆ"

"ಈವೊತ್ತು ಬಂದ ಬಸ್ಸಲ್ಲೇ ಓಗಾಣ್ ಕಾಣಣ್ಣ, ಅದೇನ್ ಸಂದಾಕಿತ್ತು ಅಲ್ಲವ್ರಾ?"

"ಅದಲ್ಲ, ಇಲ್ಲಿ ಸಿಟಿ ಬಸ್ಸು ಅಂತ ಇರುತ್ತೆ ಅದರಲ್ಲಿ ಹೋಗ್ಬೇಕು, ಅದಿನ್ನೂ ಚೆನ್ನಾಗಿರುತ್ತೆ. ಅದೂ ಅಲ್ದೆ ಸಿಟಿನಲ್ಲಿ ರಸ್ತೆ ರೈಲು, ಮಹಡಿ ಬಸ್ಸು ಎಲ್ಲಾ ಇರುತ್ತೆ. ನೋಡಿವಂತೆ".

"ಆಂ....." ರಾಮ ಬಾಯಿ ತೆಗೆದು ಹಾಗೇ ಮೂಕನಂತೆ ನಿಂತು ಬಿಟ್ಟ.

"ಯಾಕೋ ರಾಮ ಹಾಗೆ ನಿಂತು ಬಿಟ್ಟೆ?"

"ಅದೇನಂದ್ರಣ್ಣ ನೀವು ಮತ್ತೊಂದ್ಕಿತ ಯೇಳಿ"

"ರಸ್ತೆ ರೈಲು, ಮಹಡಿ ಬಸ್ಸು"

"ಅಣ್ಣಾ ಮಾಡಿ ಇರೋ ಬಸ್ಸು ಇರ್ತೈತ? ಅದೇ ನಮ್ಮೂರ್ ಗೌಡ್ರು ಒಂದ್ರ ಮ್ಯಾಗೆ ಒಂದು ಮನೆ ಕಟ್ಸವ್ರಲ್ಲ ಅಂಗಿರ್ತೈತ? ಮ್ಯಾಗಡೆ ಇರೋರು ಕೆಳಕ್ಕೆ ಬೀಳಕ್ಕಿಲ್ವ್ಸ?, ಮ್ಯಾಕೆ ಎಂಗೋಗ್ತಾರೆ, ಮೇಗಡೇ ಬಸ್ಸು ಎಂಗೋಯ್ತದೆ? ಅಣ್ಣಾ ನೀವು ದಿಟ ಯೇಳ್ತಿದೀರ ತಾನೆ?. ನಗ್ಸಾರ ಮಾಡ್ಬೇಡಿ ಅಣ್ಣ".

"ನಾನ್ಯಾಕೋ ತಮಾಷೆ ಮಾಡ್ಲಿ ನಾಳೆ ನೀನೆ ನೋಡು".

"ಆಗಿದ್ರೆ ಅದರಲ್ಲೆ ಪ್ಯಾಟೆಗೆ ಹೋಗೋಣ".

"ನಮ್ಮ ಮನೆಯಿಂದ ಹೋಗಕ್ಕೆ ಆಗಲ್ಲ, ಸಿಟಿನಲ್ಲಿ ತೋರಿಸ್ತೀನಿ ಅಷ್ಟೆ,"

ಅಂದು ರಾತ್ರಿಯೂ ರಾಮನಿಗೆ ನಿದ್ದೆಯಿಲ್ಲ. "ಯಾಕೋ ರಾಮ ನಿದ್ದೆ ಬರ್ತಿಲ್ವಾ" ಎಂದು ಕೇಳಿದರೆ, "ಇಲ್ಲಣ್ಣ ಬಸ್ಸಲ್ಲೆ ಕೂತಂಗೈತೆ, ಬಸ್ಸನ್ನ ನಾನೇ ಓಡಿಸ್ದಂಗೈತೆ, ಅಣ್ಣಾ ನಂಗ್ ಭಯ ಆಯ್ತೈತೆ",

"ಯಾಕೋ ಭಯ?",

"ಎಚ್ಚೆ ನಿದ್ದೆ ಮಾಡ್ಬುಟ್ರೆ, ವತ್ತಾರೆ ಯೇಳೋದು ತಡ ಆತೈತೆ, ಆಮೇಲೆ ಮೆಸ್ಸೆಸಿಕ್ಕು ಓಗಕ್ಕಾಗಾಕ್ಕಿಲ್ಲಾ",

ಅಂತೂ ರಾಮ ಎರಡನೆಯ ದಿನವೂ ಇಡೀ ರಾತ್ರಿ ನಿದ್ದೆ ಮಾಡಲಿಲ್ಲ. ಬೆಳಗಾಗುವ ವೇಳೆಗೆ ಕಣ್ಣುಗಳು ಕೆಂಪಗಾಗಿದ್ದವು.

****

ಮಾರನೆ ದಿವಸ ಅಮ್ಮ ಮಾಡಿಕೊಟ್ಟ ತಿಂಡಿ ತಿಂದು ರಾಮನನ್ನು ಮೆಜೆಸ್ಟಿಕ್ ಗೆ ಕರೆದುಕೊಂಡು ಹೊರಟೆ. ಮತ್ತೆ ರಾಮನ ಪ್ರಶ್ನೆಗಳ ಸುರಿಮಳೆ ದಾರಿಯುದ್ದಕ್ಕೂ ಇದ್ದೇ ಇತ್ತು. ಜೊತೆಗೆ ದಾರಿಯುದ್ದಕ್ಕೂ ಕಾರು, ಆಟೋ, ಕಟ್ಟಡಗಳ ನೋಡಿ ಪ್ರಶ್ನೆಗಳ ಕೇಳಿದ್ದೂ ಕೇಳಿದ್ದೇ.

ಮೆಜೆಸ್ಟಿಕ್ ನಲ್ಲಿ ಆ ಜನಸಂದಣಿ, ಬಸ್ಸುಗಳ ಸಾಲು ಸಾಲು ನೋಡಿ ಬೆರಗಾದ ರಾಮ. ಕೆಂಪೇಗೌಡ ರಸ್ತೆಗೆ ಕರೆದುಕೊಂಡು ಹೋದೆ. ಚಿತ್ರಮಂದಿರಗಳ ಸಾಲು, ಅಂಗಡಿಗಳ ವೈಭವ, ರಸ್ತೆಯಲ್ಲಿ ಸಾಗುವ ವಾಹನಗಳ ಭರಾಟೆ, ಅವನನ್ನು ತಬ್ಬಿಬ್ಬಾಗಿಸಿದ್ದವು. ನನ್ನ ಕೈ ಹಿಡಿದುಕೊಂಡೇ ಕಣ್ಣುಕಣ್ಣು ಬಿಟ್ಟುಕೊಂಡು ಎಲ್ಲವನ್ನೂ ನೋಡುತ್ತಾ ಬಂದ.

ಆಗ ರಸ್ತೆಯಲ್ಲಿ ಸಾಗುತ್ತಿದ್ದ ಮಹಡಿ ಬಸ್ಸುಗಳ ಅವನಿಗೆ ತೋರಿಸಿದೆ, ಗಾಂಧಿ ಬಜಾರ್, ಜಯನಗರ, ಅಲಸೂರುಗಳಿಗೆ ಡಬಲ್ ಡೆಕ್ಕರ್ ಬಸ್ಸುಗಳು ಹೋಗುತ್ತಿದ್ದ ಕಾಲವದು.

""ಹೌದಣ್ಣಾ, ನೀನು ಹೇಳಿದ್ದು ದಿಟಾನೆ, ಬಸ್ ಮ್ಯಾಕೆ ಒಂದು ಬಸ್ಸೈತೆ, ಆದ್ರೆ ಮ್ಯಾಗ್ಲಿನ್ ಬಸ್ ಗೆ ಗಾಲಿಗ್ಳೇ ಇಲ್ವಲ್ಲಣ್ಣಾ ಆದ್ರು ಅವು ಮುಂದಕ್ಕೋಯ್ತಾ ಅವೆ, ಅದೆಂಗಣ್ಣ". ಮುಂದೆ ಸಾಗುವುದನ್ನೂ ಮರೆತು ಆ ಬಸ್ಸುಗಳು ಕಣ್ಣಿನಿಂದ ಮರೆಯಾಗುವವರೆವಿಗೂ ನೋಡುತ್ತಲೇ ನಿಂತು ಬಿಟ್ಟ.

"ಅಣ್ಣಾ, ಒಂದೇ ಒಂದ್ಕಿತ ಮಾಡಿ ಬಸ್ಸಲ್ಲಿ ಕರ್ಕೊಂಡ್ ಹೊಗಣ್ಣೋ"

ಮುಂದಿನ ಪುಟ ನೋಡಿ ...

"ನಿಂದೊಳ್ಳೆ ಕಥೆ ಆಯ್ತೇ, ಮೊದ್ಲು ಬೆಂಗ್ಳೂರ್ ನೋಡ್ಬೇಕಂದೆ, ಆಮೇಲೆ ಬಸ್ಸಲ್ಲಿ ಹೋಗ್ಬೇಕಂದೆ, ಎರಡೂನೂ ಆಯ್ತು, ಈವಾಗ ಮಾಡಿ ಬಸ್ಸು ಅಂತ ಶುರು ಮಾಡ್ಕೊಂಡಿದ್ದೀಯ, ಅದಕ್ಕಿಂತಾನೂ ಕಬ್ಬನ್ ಪಾರ್ಕ್ ತೊರುಸ್ತೀನಿ ಬಾ,' ಎಂದು ಮುಂದಕ್ಕೆ ಎಳೆದುಕೊಂಡು ಹೊರಟೆ.

ಎಲ್ಲವನ್ನೂ ನೋಡುತ್ತಾ ಭ್ರಮಾ ಲೋಕದಲ್ಲಿದ್ದಂತಿದ್ದ ರಾಮ. ಆದರೆ ಅವನಿಗೆ ಆ ವೇಳೆಗೆ ಹಸಿವು ಆಯಾಸಗಳು ಸಾಕಷ್ಟಾಗಿತ್ತು. ಕೆಂಪೇಗೌಡ ಚಿತ್ರಮಂದಿರದ ಕೆಳಗಿದ್ದ ವಿಷ್ಣುಭವನ್ ಗೆ ಕರೆದುಕೊಂಡು ಹೋಗಿ ಮಸಾಲೆದೋಸೆ ಕೊಡಿಸಿದೆ. ಸಂದಾಕೈತೆ, ಸಂದಾಕೈತೆ ಎನ್ನುತ್ತಾ ಎರಡೆರಡು ದೋಸೆಗಳ ತಿಂದ. ಮನೆಯಿಂದ ಹೊರಡುವಾಗ ತಂದೆಯವರು ಕೈಗೆ ಸಾಕಷ್ಟು ಹಣ ನೀಡಿದ್ದರು, ಜೊತೆಗೆ ಅಮ್ಮ ಬೇರೆ ಒಂದಷ್ಟು ಕೈಗಿತ್ತಿದ್ದರು.

ದೋಸೆಗಳು ಚೆನ್ನಾಗಿ ಕೆಲಸ ಮಾಡಲಾರಂಭಿಸಿದ್ದವು. ಹೊಟ್ಟೆಗೆ ಬಿದ್ದ ಮೇಲೆ ರಾಮ ತೂಕಡಿಸಲಾರಂಭಿಸಿದ್ದ. "ನಡೆಯೋ ರಾಮ, ನಿದ್ದೆ ಮಾಡಬೇಡ,ಇನ್ನು ನೋಡೊದು ಇದೆ," ಎಂದೆ.

" ಇಲ್ಲ ನಡ್ಯಣ್ಣ, ನಿದ್ರೆ ಬರ್ತಿಲ್ಲ ನಂಗೆ" ಎನ್ನುತ್ತ ಮತ್ತೆ ಹೊರಟ ರಾಮ. ಸಂಜೆಯ ವೇಳೆಯಾಗಿ ಅಂಗಡಿ ಮುಂಗಟ್ಟುಗಳ ಮುಂದೆ ದೀಪಗಳು ಹಾಕಿ, ಬಣ್ಣಬಣ್ಣದ ದೀಪಗಳು ಮಿನುಗುತ್ತಿದ್ದವು.

"ಏನಣ್ಣ ಈ ದೀಪ್ಗೋಳು ಬಣ್ಬಣ್ಣ ಐತೆ, ಅಲ್ದೆ ನಮ್ಮೂರ್ನಾಗೆ ಮಿಣುಕು ಹುಳುಗ್ಳಂಗೆ ಪುಳುಕ್ ಪುಳುಕ್ ಅಂತಾ ಇವೆ. ಅಣ್ಣ ದಿಟ ಏಳ್ಬೇಕಂದ್ರೆ ನಿಮ್ಮೂರು ದೇವ್ಲೋಕ ಇದ್ದಂಗೈತ್ ಕಾಣಣ್ಣೋ." ರಾಮ ಕಣ್ಣುಗಳ ಉಜ್ಜುತ್ತ, ಆಕಳಿಸುತ್ತಲೇ ನುಡಿದ.

"ಹೋಗ್ಲಿ ಬಿಡು ಇಷ್ಟ ಆಯಿತಲ್ಲ ನಿಂಗೆ, ಇನ್ನು ಮನೆಗೆ ವಾಪಸ್ ಹೋಗೋಣಾ?"

"ಅಣ್ಣಾ, ಅಣ್ಣೋ...",

"ಏನೋ ಅದು?"

"ಒಂದ್ಕಿತ ಮಾಡಿ ಬಸ್ನಾಗೆ ಕರ್ಕೊಂಡ್ ಹೋಗ್ಬಿಡಣ್ಣ, ಮತ್ತೆ ನಾನು ನಿಮ್ಮೂರಿಗ್ ಬರ್ತೀನೋ ಇಲ್ವೊ?"

ಯೋಚನೆ ಮಾಡಿದೆ " ಸರಿ ನಡಿ, ಮೈಸೂರ್ ಬ್ಯಾಂಕ್ ಸ್ಟಾಪ್ ಗೆ ಹೋಗೋಣ, ಅಲ್ಲಿ ಯಾವುದಾದ್ರು ಮಹಡಿ ಬಸ್ ಹತ್ತಿ ಮೆಜೆಸ್ಟಿಕ್ ಬಸ್ಟ್ಯಾಂಡ್ ತನಕ ಬರೋಣ" ಎನ್ನುತ್ತಾ ಮುಂದೆ ಸಾಗಿದೆ.

ರಾಮ ಜೊತೆಗೆ ಬರಲಿಲ್ಲ, ಹಿಂದಿರುಗಿ ನೋಡಿದರೆ ಕೆಳಗೆ ಕುಳಿತುಬಿಟ್ಟಿದ್ದ. ಯಾಕೆಂದು ಹತ್ತಿರ ಹೋಗಿ ನೋಡಿದರೆ ತೂಕಡಿಸುತ್ತಿದ್ದ. ಅಲುಗಾಡಿಸಿ ಎಬ್ಬಿಸಿದೆ. " ಬಾ ಬಾ ಮುಂದೆ ಸಿಗೋದೆ ಮೈಸೂರು ಬ್ಯಾಂಕ್, ಅಲ್ಲಿ ಮಹಡಿ ಬಸ್ಸು ಹತ್ತಿ ಬಿಡೋಣ ನಡಿ" ಎನ್ನುತ್ತಾ ಅವನ ಕೈ ಹಿಡಿದು, ಎಳೆದುಕೊಂಡೇ ನಡೆದೆ. ಅಲ್ಲಿಗೆ ಸೇರುವ ವೇಳೆಗೆ ರಾಮನಿಗೆ ಹೆಜ್ಜೆಯಿಡಲೂ ಆಗದಂತ ನಿದ್ದೆ. ಬಸ್ಟ್ಯಾಂಡಿನಲ್ಲಿ ನೆಲದಮೇಲೆ ಕುಳಿತು ತೂಕಡಿಸಲಾರಂಬಿಸಿದ. ನಾನು ಬಸ್ಸಿಗೆ ಕಾಯಲಾರಂಭಿಸಿದೆ. ಗಾಂಧಿ ಬಜಾರ್ ನಿಂದ ೩೬ ಮಹಡಿ ಬಸ್ ಬಂತು "ರಾಮ ಏಳೋ ಬಸ್ ಬಂತು" ಎಂದೆ, ರಾಮ ಅಲ್ಲಿಯೇ ಮಲಗಿಯೇ ಬಿಟ್ಟಿದ್ದಾನೆ. ಅವನನ್ನು ಎಬ್ಬಿಸಲು ಪ್ರಯತ್ನಿಸುತ್ತಿದ್ದಂತೆಯೇ ಆ ಬಸ್ಸು ಹೊರಟೇ ಹೋಯಿತು.

ಜಯನಗರದಿಂದ, ಅಲಸೂರಿನಿಂದ, ಗಾಂಧಿಬಜಾರ್ ನಿಂದ, ಮತ್ತೆ ಜಯನಗರ..... ಹೀಗೆ ಹಲವಾರು ಮಹಡಿ ಬಸ್ಸುಗಳು ಹೋಗುತ್ತಲೇ ಇದ್ದವು, ನಾನು ಅವನನ್ನು ಎಬ್ಬಿಸುತ್ತಲೇ ಇದ್ದೆ. ಅಲ್ಲಿದ್ದವರೆಲ್ಲರೂ ನಮ್ಮಿಬ್ಬರನ್ನೇ ನೋಡುತ್ತಿದ್ದರು.

ಕಡೆಗೆ ಅಲ್ಲಿದ್ದ ಹಿರಿಯರೊಬ್ಬರು "ಎಲ್ಲಿಗೆ ಹೋಗಬೇಕಪ್ಪಾ" ಎಂದರು, "ರಾಜಾಜಿನಗರ" ಎಂದೆ.

ಮಾರ್ಕೆಟ್ ನಿಂದ ಮೈಸೂರುಬ್ಯಾಂಕ್ ಮಾರ್ಗವಾಗಿ ರಾಜಾಜಿನಗರಕ್ಕೆ ಹೋಗುವ ಬಸ್ ಬಂದಾಗ " ನೀನು ಹತ್ತಪ್ಪ, ನಾನು ಇವನನ್ನು ಎತ್ತಿಕೊಡುತ್ತೇನೆ" ಎಂದರು. ಪಾಪ ಅವನನ್ನು ಬಸ್ಸಿನ ಒಳಗೆ ಕರೆತಂದು ನನ್ನಪಕ್ಕ ಸೀಟಿನ ಮೇಲೆ ಕೂಡಿಸಿದರು.

ಬಸ್ಸು ಮುಂದಕ್ಕೆ ಹೊರಟಾಗ ಒಮ್ಮೆ ದೊಡ್ಡದಾಗಿ ಕಣ್ಣುಬಿಟ್ಟು ಸುತ್ತಲೂ ನೋಡಿದ ರಾಮ, ಎಲ್ಲಿದ್ದೇನೆಂದೂ ಅರಿವಾಗದ ನಿದ್ರಾಪರಿಸ್ಥಿತಿ ಅವನದು. ಸೀಟಿನಿಂದ ಹಾಗೇ ಕೆಳಗೆ ಜಾರಿ, ಕೆಳಗೆ ಉದ್ದಕ್ಕೂ ಮಲಗಿ ಕುಂಭಕರ್ಣನ ಹಾಗೆ ಗೊರಕೆ ಹೊಡೆಯಲಾರಂಭಿಸಿದ್ದ.

ಈ ಘಟನೆ ನಡೆದು ಸುಮಾರು ಮೂವತ್ತೈದು ವರ್ಷಗಳ ಮೇಲಾದರೂ, ಇಂದಿಗೂ ನಾನು ಎಲ್ಲಾದರೂ ಮಹಡಿಬಸ್ಸನ್ನು ನೋಡಿದರೆ ರಾಮನ್ನನ್ನು ನೆನಪಿಸಿಕೊಳ್ಳುತ್ತೇನೆ. ▪

ಸಿಡ್ನಿ ಕನ್ನಡ ಶಾಲೆ (ನೊಂ)
Sydney Kannada School(Inc)

ಸಿಡ್ನಿಯಲ್ಲಿರುವ ಕನ್ನಡ ಶಾಲೆಯಲ್ಲಿ ಕಲಿಯಲು ಈ ಇಮೇಲ್ ವಿಳಾಸಕ್ಕೆ ಪತ್ರ ಬರೆಯಿರಿ

sugamakannada@gmail.com

ವಿಜ್ಞಾನ

ಬೆರೆಯದ ಕಾಕ್ ಟೈಲ್

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ದಾಳಿಂಬೆ, ಕಿತ್ತಳೆ, ಬಿಳಿ ದ್ರಾಕ್ಷಿಯ ರಸ
- ಉದ್ದನೆಯ ಗಾಜಿನ ಲೋಟ

ವಿಧಾನ:

- ಸೂಚನೆ: ರಸದಲ್ಲಿನ ಸಕ್ಕರೆಯ ಪ್ರಮಾಣದ ಮೇಲೆ ಚಿತ್ರದಲ್ಲಿ ತೋರಿರುವಂತೆ ಅದೇ ಶ್ರೇಣಿಯಲ್ಲಿ (ಆರ್ಡರ್) ಬರದಿರಬಹುದು.
- ಚಿತ್ರದಲ್ಲಿ ತೋರಿಸಿರುವಂತೆ ಒಂದರ ಮೇಲೊಂದು ರಸವನ್ನು ನಿಧಾನವಾಗಿ ಸುರಿಯುತ್ತ ಬನ್ನಿ. ಹೆಚ್ಚು ಕುಲುಕಾಟವಿದ್ದರೆ ಪ್ರಯೋಗ ಸರಿಯಾಗಿ ಮೂಡದು
- ಒಂದಕ್ಕೊಂದು ಸುಲಭವಾಗಿ ಬೆರೆಯದೆ, ಏಕೆ ಒಂದರ ಮೇಲೊಂದು ಪಟ್ಟಿಯಂತೆ ನಿಲ್ಲುತ್ತದೆ ಎಂದು ಯೋಚಿಸಿ.

ಏನಾಗುತ್ತಿದೆ:

ದ್ರವದ ಸಾಂದ್ರತೆ (Density) ಹಣ್ಣಿನ ರಸದಲ್ಲಿನ ಪರಮಾಣುಗಳ ಮತ್ತು ಒಟ್ಟು ಸಮೂಹದ ಮೊತ್ತವನ್ನು ನಿರೂಪಿಸುತ್ತದೆ. ಒಂದು ಸುಲಭ ಅರಿವಿನ ಮೂಲಕ ಇದನ್ನು ನೀವು ತಿಳಿಯಬಹುದು. ಒಂದು ಲೋಟದಲ್ಲಿನ ನೀರು ಮತ್ತು ಇನ್ನೊಂದು ಲೋಟದಲ್ಲಿನ ಕರಗಿದ ಸಕ್ಕರೆಯ ನೀರನ್ನು ನೀವು ಹೋಲಿಸಿ ನೋಡಿದರೆ, ಸಕ್ಕರೆಯ ನೀರು ಹೆಚ್ಚು ಸಾಂದ್ರತೆಯುಳ್ಳದ್ದಾಗಿರುತ್ತದೆ. ಅದೇ ರೀತಿ, ಈ ಪ್ರಯೋಗದಲ್ಲಿ ವಿವಿಧ ಹಣ್ಣಿನ ರಸದಲ್ಲಿನ ಅಂಶಗಳು, ಮುಖ್ಯವಾಗಿ ಸಕ್ಕರೆಯ ಅಂಶವು ಸಾಂದ್ರತೆಯನ್ನು ನಿರ್ಧರಿಸುತ್ತವೆ. ಹೀಗಾಗಿ ಬೇರೆ ಬೇರೆ ಸಾಂದ್ರತೆಯುಳ್ಳ ರಸಗಳನ್ನು ಒಂದರ ಮೇಲೊಂದರ ಪಟ್ಟಿಯಂತೆ ಆ ಗಾಜಿನ ಲೋಟದಲ್ಲಿ ಸುರಿಯಬಹುದು. ಈ ಪ್ರಯೋಗವನ್ನು ಮಾಡಿದರೆ, ಅಂಗಡಿಯಿಂದ ತಂದು ಕುಡಿಯುವ ಹಣ್ಣಿನ ರಸಗಳಲ್ಲಿ ಹೆಚ್ಚು ಸಕ್ಕರೆ ಅಂಶ ಇರುವ ರಸವನ್ನು ಕಂಡುಹಿಡಿಯಬಹುದು. (ಬರೀ ಸಕ್ಕರೆ ಮಾತ್ರವೇ ಸಾಂದ್ರತೆ ನಿರ್ಧರಿಸದಿದ್ದರೂ, ಈಗಿನ ಅನೇಕ ಸಿದ್ಧಪಡಿಸಿದ ರಸಗಳಲ್ಲಿ ಸಕ್ಕರೆಯು ಮುಖ್ಯ ಅಂಶವೆನ್ನುವುದು ಜನಜನಿತ) ▪

ಜಾಣ ಕರ್ನಾಟಕ – ಉತ್ತರ

೧. ಶ್ರೀ. ಜಯಚಾಮರಾಜೇಂದ್ರ ಒಡೆಯರ್. ಈಗಿರುವವರು ೧ಲನೆಯ ರಾಜ್ಯಪಾಲರು.

೨. ಖುರ್ಶಿದ್ ಆಲಮ್ ಖಾನ್. ಇವರ ಅಧಿಕಾರದ ಸಮಯ ೬ ಜನವರಿ ೧೯೯೬ ರಿಂದ ೨ ಡಿಸೆಂಬರ್ ೧೯೯೬

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪುರಂದರ ದಾಸರ ಆರಾಧನೆ

ಫೆಬ್ರವರಿ ೨೧, 2016 ಬೆಳಿಗ್ಗೆ ೦೯:00 ಕ್ಕೆ

Ermington Community Hall, 8 River Road, Ermington.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

Purandarasydney@yahoo.com.au

ಹೋಳಿ ಹಬ್ಬ

ಮಾರ್ಚ್ ೦೨, 2016 ಬೆಳಿಗ್ಗೆ 11:00 ಕ್ಕೆ

Blacktown Showgrounds, Richmond Rd , Blacktown NSW 2148

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

www.holimela.com.au

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ – ಮುಖ ಪುಟದಲ್ಲಿನ ರಂಗವಲ್ಲಿಯ ಕೃಪೆ – ರಶ್ಮಿ ಸೋಮಶೇಖರ್

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.